KAMD600004022020

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ

**ದಿನಾಂಕಃ 9 ನೇ ಏಪ್ರಿಲ್ 2026**

ಃ ಉಪಸ್ಥಿತರು ಃ

ಶ್ರೀ ಆರ್.ಮಹೇಶ, ಬಿ.ಎ.ಎಲ್, ಎಲ್.ಎಲ್.ಬಿ.,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ

**ಸಿ.ಸಿ.ಸಂಖ್ಯೆ 176/2020**

ಪಿರ್ಯಾದುದಾರರು : ಸರ್ಕಾರದ ಪರ ಪಾಂಡವಪುರ ಠಾಣಾ ಪೊಲೀಸರು

(ಪ್ರತಿನಿಧಿಸಿದವರು ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ : 1. ಸೈಯದ್ ವಸೀಂ ಉಃ ಸೈಯದ್ ಉಃ ಮುಸ್ತಕ್ ಬಿನ್ ಸೈಯದ್ ಯಾಸುಫ್, 25 ವರ್ಷ, ವಾಸಃ ನಂ. 124, ಜನತಾ ಮನೆ, ರಮಾಬಾಯಿನಗರ, 3 ನೇ ಬ್ಲಾಕ್, ಶ್ರೀನಗರ, ಮೈಸೂರು. - ದಿನಾಂಕ 28.10.2019 ರಂದು ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದ ಮುಂದೆ ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾರೆ.

2. ಸಮೀರ್ ಖಾನ್ ಉಃ ಸಮೀರ್ ಉಃ ಸಮ್ಮು ಬಿನ್ ಮಜರ್ ಖಾನ್ ಉಃ ಮಜರ್ ಉಃ ಕಾರ್ಪೊರೇಟರ್ ಮಜರ್, 24 ವರ್ಷ, ವಾಸಃ ಹಳೆ ವಿಳಾಸಃ ನಂ. 3236, 2 ನೇ ಕ್ರಾಸ್, 2 ನೇ

ಈದಿಗಾ, ಸಿ ವಿ ರಸ್ತೆ, ಮೈಸೂರು. ಹಾಲಿ ವಿಳಾಸಃ ಮದೀನ ಹೋಟೆಲ್, ಸಿ ವಿ ರಸ್ತೆ, 2 ನೇ ಈದಿಗಾ, ಮೈಸೂರು.

3. ಸಮಿವುಲ್ಲಾ ಉಃ ಮೀಟರ್ ಸಮಿ ಬಿನ್ ಆರ್ ಎ ಕರೀಂ ಖಾನ್ ಉಃ ಮುನೀರ್, 34 ವರ್ಷ, ವಾಸಃ ನಂ. 46, ಚಕ್ಲದ ಮಂಡಿ ಬೀದಿ, 3 ನೇ ಕ್ರಾಸ್, ಬಿ ಶೆಟ್ಟಹಳ್ಳಿ, ನಾಗಮಂಗಲ ಮುಖ್ಯ ರಸ್ತೆ, ಪಾಂಡವಪುರ ಟೌನ್. - ದಿನಾಂಕ 03.05.2019 ರ ಆದೇಶದ ಆದೇಶದಂತೆ ಈ ಆರೋಪಿಯ ವಿರುದ್ಧ ಪ್ರತ್ಯೇಕ ವಿಭಜಿತ ಪ್ರಕರಣ ಸಿ ಸಿ 6/2019 ದಾಖಲಾಗಿರುತ್ತದೆ.

**(2 ನೇ ಆರೋಪಿ ಪರ ಶ್ರೀ ಎ ಎಸ್, - ವಕೀಲರು)**

ತೀರ್ಪು

ಆರಕ್ಷಕ ನಿರೀಕ್ಷಕರು, ಪಾಂಡವಪುರ ಪೊಲೀಸ್ ಠಾಣೆ ರವರು ಠಾಣಾ ಮೊಕದ್ದಮೆ ಸಂಖ್ಯೆ 233/2011 ರಲ್ಲಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 380, 457 ರನ್ವಯ ದಂಡಿಸಲ್ಪಡಬಹುದಾದ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿತರ ಮೇಲೆ ತನಿಖೆ ಕೈಗೊಂಡು ದೋಷಾರೋಪಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಃ**-**

ದಿನಾಂಕ 11.05.2011 ರಂದು ರಾತ್ರಿ ಸಮಯದಲ್ಲಿ ಪಾಂಡವಪುರ ಪೋಲೀಸ್ ಠಾಣಾ ಸರಿಹದ್ದಿನ ಪಾಂಡವಪುರ ಟೌನಿನಲ್ಲಿ ಆರೋಪಿತರು ಚಾಸಾ 1 ರವರಿಗೆ ಸೇರಿದ ನಾಕೋಡಾ ಜುಯಲರ್ಸ್ ಅಂಗಡಿಯ ಬಾಗಿಲ ಪಾಟ್ ಲಾಕನ್ನು ಹೊಡೆದು ಹಾಕಿ ಅಂಗಡಿಯ ಒಳಕ್ಕೆ ಪ್ರವೇಶ ಮಾಡಿ ಒಳಗಡೆ ಷೋಕೇಸಿನಲ್ಲಿದ್ದ ರೂ.38 ಸಾವಿರ ಬೆಲೆ ಬಾಳುವ ಬೆಳ್ಳಿಯ ಒಡವೆಗಳನ್ನು ಮಾಡಿಕೊಂಡು ಹೋಗಿ ಚಾಸಾ 9 ರವರಿಗೆ ಮಾರಾಟ ಮಾಡಿರುತ್ತೀರಿ. ಆದ್ದರಿಂದ, ಚಾಸಾ.1 ರವರು ದೂರು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ಪೊಲೀಸರು ತನಿಖೆ ಕೈಗೊಂಡು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 380, 457 ರ ಅನ್ವಯ ದಂಡಿಸಲ್ಪಡಬಹುದಾದ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊಂಡು 2 ನೇ ಆರೋಪಿಗೆ ಸಮನ್ಸ್ ಜಾರಿ ಮಾಡಲಾಯಿತು. ಆರೋಪಿ ಸಮನ್ಸ್ ಅನ್ನು ಸ್ವೀಕರಿಸಿಕೊಂಡು, ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ಅವರಿಗೆ ಅಭಿಯೋಜನೆಯ ದಾಖಲೆ ಪತ್ರಗಳನ್ನು ಅಪರಾಧ ಪ್ರ.ಸಂ.ಕಲಂ 207 ರ ಅಡಿಯಲ್ಲಿ ಪೂರೈಸಲಾಗಿರುತ್ತದೆ. ಆರೋಪಿ ತಮ್ಮ ಮೇಲೆ ಇರುವ ಆರೋಪಗಳನ್ನು ಸುಳ್ಳೆಂದು ಅಲ್ಲಗಳೆದಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ಇಡಲಾಯಿತು.

4. ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ.1 ರಿಂದ 16 ರವರುಗಳನ್ನು ವಿಚಾರಣೆಗೆ ಒಳಪಡಿಸಿ, ಅವರಿಂದ 12 ದಾಖಲೆಗಳನ್ನು ನಿಪಿ.1 ರಿಂದ ನಿಪಿ.12 ಎಂದು ಗುರುತಿಸಿಕೊಂಡಿರುತ್ತದೆ. ದಂಡ ಪ್ರಕ್ರಿಯ ಸಂಹಿತೆ ಕಲಂ 313 ರನ್ವಯ 2 ನೇ ಆರೋಪಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. 2 ನೇ ಆರೋಪಿ ಅಭಿಯೋಜನೆಯ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರವಾಗಿ ಯಾವುದೇ ರಕ್ಷಣಾತ್ಮಕ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

5. ಉಭಯ ಪರ ವಾದವನ್ನು ಕೇಳಿದೆನು, ಕಡತವನ್ನು ಪರಿಶೀಲಿಸಿದೆನು.

6. ಈಗ ನಾನು ತೀರ್ಮಾನಿಸಬೇಕಾದ ಅಂಶಗಳೇನೆಂದರೆ :-

1. ದಿನಾಂಕ 11.05.2011 ರಂದು ರಾತ್ರಿ ಸಮಯದಲ್ಲಿ ಪಾಂಡವಪುರ ಪೋಲೀಸ್ ಠಾಣಾ ಸರಿಹದ್ದಿನ ಪಾಂಡವಪುರ ಟೌನಿನಲ್ಲಿ ಆರೋಪಿತರು ಚಾಸಾ 1 ರವರಿಗೆ ಸೇರಿದ ನಾಕೋಡಾ ಜುಯಲರ್ಸ್ ಅಂಗಡಿಯ ಬಾಗಿಲ ಪಾಟ್ ಲಾಕನ್ನು ಹೊಡೆದು ಹಾಕಿ ಅಂಗಡಿಯ ಒಳಕ್ಕೆ ಪ್ರವೇಶ ಮಾಡಿ ಒಳಗಡೆ ಷೋಕೇಸಿನಲ್ಲಿದ್ದ ರೂ.38 ಸಾವಿರ ಬೆಲೆ ಬಾಳುವ ಬೆಳ್ಳಿಯ ಒಡವೆಗಳನ್ನು ಮಾಡಿಕೊಂಡು ಹೋಗಿ ಚಾಸಾ 9 ರವರಿಗೆ ಮಾರಾಟ ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ 380, 457 ರ ಅನ್ವಯ ದಂಡನಾರ್ಹ ಅಪರಾಧಗಳಿಗೆ ರಚಿತವಾದ ಆರೋಪಗಳನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ ?

2. ಯಾವ ಆದೇಶ ?

**7.** ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತಿದೆ.

ಅಂಶ.**1** ಃ ನಕಾರಾತ್ಮಕವಾಗಿ,

ಅಂಶ.**2**ಃ ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ ಃ

ಕಾ ರ ಣ ಗ ಳು

**8.** ಅಂಶ.**1** ಃ- ಅಭಿಯೋಜನೆಯು 2 ನೇ ಆರೋಪಿಯ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಾಕ್ಷಿದಾರರ ಸಾಕ್ಷ್ಯಗಳಿಂದ ನಿರೂಪಿಸಲು ಪ್ರಾಸಾ-1 ರಿಂದ 16 ಎಂದು ವಿಚಾರಣೆಗೆ ಗುರಿಪಡಿಸಿ, ಸದರಿ ಸಾಕ್ಷಿದಾರರ ಮೂಲಕ ನಿಪಿ.1 ರಿಂದ ನಿಪಿ.12 ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತದೆ.

9. ಅಭಿಯೋಜನೆಯವರು ಚಾಸಾ.1 ರವರನ್ನು ಪ್ರಾಸಾ.1 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ದೂರುದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ಇವರು ಕಳೆದ 20 ವರುಷಗಳಿಂದ ಪಾಂಡವಪುರ ಪೋಲೀಸ್ ಠಾಣೆ ರಸ್ತೆಯಲ್ಲಿ ನಾಕೋಡಾ ಜ್ಯುವೆಲರಿ ಅಂಗಡಿ ಇಟ್ಟುಕೊಂಡಿದ್ದು, ಸುಮಾರು 7 ವರುಷಗಳ ಹಿಂದೆ ಒಂದು ದಿನ ನನ್ನ ಸಹೋದರ ಎಂದಿನಂತೆ ವ್ಯಾಪಾರ ವಹಿವಾಟು ಮಾಡಿ ಸಂಜೆ 5.30 ಸುಮಾರಿಗೆ ಅಂಗಡಿ ಬಾಗಿಲು ಹಾಕಿಕೊಂಡು ಬಂದಿದ್ದನು. ನಂತರ 12.5.2011 ರಂದು ಬೆಳಿಗ್ಗೆ 9 ಗಂಟೆಗೆ ಇವರು ಅಂಗಡಿಯ ಬಾಗಿಲು ತೆಗೆಯಲು ಹೋದಾಗ ಅಂಗಡಿಯ ಲಾಕ್, ಚಾಲನ್ ಗೇಟ್ ಹೊಡೆದುಹೋಗಿತ್ತು. ಒಳಗೆ ಹೋಗಿ ನೋಡಿದಾಗ ಅಂಗಡಿಯ ಡ್ರಾಯರಲ್ಲಿದ್ದ 1,500 ರೂ. ಹಣ, ಷೋಕೇಸಿನಲ್ಲಿದ್ದ ಒಟ್ಟು ತೂಕ 1,600 ಗ್ರಾಂ ಬೆಳ್ಳಿಯ ಮುಖವಾಡ, ಕಾಲುಚೈನು, ಕಾಲುಂಗುರಗಳು, ಕತ್ತಿರ ಸರ, ಬೆಳ್ಳಿಯ ದೀಪ ಹಾಗೂ ಬಟ್ಟಲು ಕಳ್ಳತನವಾಗಿದ್ದವು. ನಂತರ ನಾನು ಪೋಲೀಸರಿಗೆ ದೂರು ನೀಡಿರುವುದಾಗಿ ನುಡಿದಿರುತ್ತಾರೆ. ನಂತರ ಪೋಲೀಸರು ಅಂಗಡಿಯನ್ನು ಪರಿಶೀಲನೆ ಮಾಡಿ, ಬೆರಳು ಮುದ್ರೆಗಳನ್ನು ತೆಗೆದುಕೊಂಡು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇವರು ದೂರು ನೀಡಿದ 4 ತಿಂಗಳ ನಂತರ ಮೈಸೂರಿನ ಸಿ ಸಿ ಬಿ ಪೋಲೀಸರು ನನಗೆ ಪೋನ್ ನಮ್ಮ ಅಂಗಡಿಯಲ್ಲಿ ಕಳ್ಳತನವಾಗಿದ್ದ ವಸ್ತುಗಳು ಹಾಗೂ ಕಳ್ಳರು ಸಿಕ್ಕಿರುವುದಾಗಿ ತಿಳಿಸಿದರು. ನಾನು ಅಲ್ಲಿಗೆ ಹೋಗಿ ಚಾಸಾ 24 ರವರು ತೋರಿಸಿದ ಬೆಳ್ಳಿ ವಸ್ತುಗಳನ್ನು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಪೋಲೀಸರು ಸದರಿ ವಸ್ತುಗಳನ್ನು ನ್ಯಾಯಾಲಯದ

ಮೂಲಕ ಬಿಡುಗಡೆಗೊಳಿಸಿಕೊಳ್ಳಲು ನನಗೆ ಸೂಚಿಸಿದರು. ಆರೋಪಿಗಳನ್ನು ತೋರಿಸಿದರು. ನಂತರ ನಾನು ಕಳುವಾಗಿದ್ದ ಬೆಳ್ಳಿ ವಸ್ತುಗಳನ್ನು ನ್ಯಾಯಾಲಯದ ಮೂಲಕ ಬಿಡಿಸಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

10. ಅಭಿಯೋಜನೆಯವರು ಚಾಸಾ.2 ರವರನ್ನು ಪ್ರಾಸಾ.2 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ಇವರು 1995 ನೇ ಸಾಲಿನಿಂದಲೂ ಪಾಂಡವಪುರ ಪೋಲೀಸ್ ಠಾಣೆ ರಸ್ತೆಯಲ್ಲಿ ನಾಕೋಡಾ ಜ್ಯುವೆಲರಿ ಅಂಗಡಿ ಇಟ್ಟುಕೊಂಡಿದ್ದೇನೆ. ನಾನು ಹಾಗೂ ನನ್ನ ಸಹೋದರ ಚಾಸಾ 1 ರವರು ಸದರಿ ಅಂಗಡಿಯನ್ನು ನೋಡಿಕೊಳ್ಳುತ್ತೇವೆ. 2011 ನೇ ಸಾಲಿನಲ್ಲಿ ಒಂದು ದಿನ ನನ್ನ ಸಹೋದರ ಮೈಸೂರಿನ ಬಳಿ ಮದುವೆಗೆಂದು ಹೋಗಿದ್ದರು. ನಾನು ಸಂಜೆ 3.30 ರಿಂದ 4 ಗಂಟೆ ಸಮಯದಲ್ಲಿ ಅಂಗಡಿಯ ಬಾಗಿಲು ಹಾಕಿ ಬಂದಿದ್ದೆನು. ಮಾರನೆ ದಿನ ನನ್ನ ಸಹೋದರ ಚಾಸಾ 1 ರವರು ಬೆಳಿಗ್ಗೆ 8.30 ರಿಂದ 9 ಗಂಟೆ ಸಮಯದಲ್ಲಿ ಅಂಗಡಿಯನ್ನು ತೆಗೆಯಲು ಹೋಗಿದ್ದಾಗ, ಅಂಗಡಿಯ ಲಾಕ್, ಚಾಲನ್ ಗೇಟ್ ಹೊಡೆದುಹೋಗಿರುವ ವಿಷಯವನ್ನು ಚಾಸಾ 1 ರವರು ನನಗೆ ವಿಷಯ ತಿಳಿಸಿದರು, ನಾನೂ ಸಹ ಕೂಡಲೇ ಸ್ಥಳಕ್ಕೆ ಹೋಗಿ ನೋಡಿದಾಗ ಅಂಗಡಿಯಲ್ಲಿದ್ದ 600 ಗ್ರಾಂ ಬೆಳ್ಳಿಯ ವಸ್ತುಗಳು ಹಾಗೂ ನಗದು ಹಣ ರೂ.1,500 ಕಳುವಾಗಿತ್ತು ಎಂದು ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

11. ಅಭಿಯೋಜನೆಯವರು ಚಾಸಾ.4 ರವರನ್ನು ಪ್ರಾಸಾ.3 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ಮಹಜರ್ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ಮೇ 2011 ನೇ ಸಾಲಿನಲ್ಲಿ ಕೃತ್ಯ ನಡೆ ಸ್ಥಳದಲ್ಲಿ ಪೋಲೀಸರು ಕಳ್ಳತನವಾದ ವಿಚಾರಕ್ಕೆ 11.30 ರಿಂದ 12.30 ವರೆಗೆ ಮಹಜರು ಕ್ರಮ ಜರುಗಿಸಲು ಬಂದಾಗ ನಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

12. ಅಭಿಯೋಜನೆಯವರು ಚಾಸಾ.9 ರವರನ್ನು ಪ್ರಾಸಾ.4 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ಮಹಜರ್ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ,

ನ್ಯಾಯಾಲಯದ ಮುಂದೆ 13.09.2011 ರ ಒಂದು ಪಂಚನಾಮೆಯನ್ನು ಸಾಕ್ಷಿಗೆ ತೋರಿಸಿದ್ದು, ಅದರಲ್ಲಿದ್ದ ಸಹಿ ತನ್ನದು ಎಂದು ಗುರುತಿಸಿರುತ್ತಾರೆ. ಈಗ್ಗೆ 10 ವರ್ಷಗಳಿಂದ ಮೈಸೂರಿನ ಮಂಡಿ ಮೊಹಲ್ಲಾದ ಬಿ ಎನ್ ಸ್ಟ್ರೀಟ್ ನಲ್ಲಿ ಗೇವರ್ ಚಂದ್ ಪಾನ್ ಬ್ರೋಕರ್ ಅಂಗಡಿ ನಡೆಸುತ್ತಿದ್ದೇನೆ. ಪೊಲೀಸರು ಈಗ್ಗೆ 10 ವರ್ಷಗಳ ಹಿಂದೆ ಅಂಗಡಿ ಹತ್ತಿರ ಬಂದು ಸಾಕ್ಷಿ ಹಾಕಿ ಎಂದು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು. ನಿಪಿ.3, 4 ರಲ್ಲಿರುವ ಒಡವೆಗಳನ್ನು ನಾನು ಈ ಹಿಂದೆ ನೋಡಿಲ್ಲ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ನೋಡಿಲ್ಲ, ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬೇರೆ ವಿಚಾರಗಳು ಗೊತ್ತಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಪಡೆದು ಫ್ರಾಸಾ.4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಫ್ರಾಸಾ.4 ರವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿರುವುದಿಲ್ಲ. ಸಾಕ್ಷಿದಾರರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

13. ಅಭಿಯೋಜನೆಯವರು ಚಾಸಾ.17 ರವರನ್ನು ಫ್ರಾಸಾ.5 ರವರನ್ನಾಗಿ, ಚಾಸಾ 16 ರವರನ್ನು ಫ್ರಾಸಾ 6 ರವರನ್ನಾಗಿ, ಚಾಸಾ 12 ರವರನ್ನು ಫ್ರಾಸಾ 7 ರವರನ್ನಾಗಿ, ಚಾಸಾ 11 ರವರನ್ನು ಫ್ರಾಸಾ 8 ರವರನ್ನಾಗಿ, ಚಾಸಾ 15 ರವರನ್ನು ಫ್ರಾಸಾ 9 ರವರನ್ನಾಗಿ, ಹಾಗೂ ಚಾಸಾ 19 ರವರನ್ನು ಫ್ರಾಸಾ 11 ರವರನ್ನಾಗಿ, ವಿಚಾರಣೆಗೊಳಪಡಿಸಿದ್ದು ಇವರುಗಳು ಪೋಲೀಸ್ ಅಧಿಕಾರಿ ಸಾಕ್ಷಿದಾರರುಗಳಾಗಿದ್ದು, ಇವರುಗಳು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ದಿನಾಂಕ 12.09.2011 ರಂದು ಇವರುಗಳಿಗೆ ಮೈಸೂರು ನಗರದ ಮೇಟಗಳ್ಳಿ ಪೊಲೀಸ್ ಠಾಣೆ ಮೊಕದ್ದಮೆ ಸಂಃ 122/2011 ಪ್ರಕರಣದ ಆರೋಪಿ ಮತ್ತು ಮಾಲುಗಳನ್ನು ಪತ್ತೆ ಮಾಡಿಕೊಂಡು ಬರಬೇಕೆಂದು ಕರ್ತವ್ಯಕ್ಕೆ ನೇಮಕ ಮಾಡಿದ್ದು, ಅದರಂತೆ ಇವರುಗಳು ಬೆಳಿಗ್ಗೆ 9 ಗಂಟೆಗೆ ಸಿಸಿಬಿ ಕಚೇರಿಯಿಂದ ಹೊಟರು ಲಷ್ಕರ್ ಮೊಹಲ್ಲಾ, ಮಂಡಿಮೊಹಲ್ಲಾ ಗಳ ಕಡೆ ಗಸ್ತು ಮಾಡಿಕೊಂಡು ನಜರ್ ಬಾದ್ ಪೊಲೀಸ್ ಠಾಣಾ ಸರಹದ್ದು ಟೇರೇಸಿಯನ್ ಕಾಲೇಜು ಬಳಿ ಸಂಜೆ 4.30 ಗಂಟೆಗೆ ಗಸ್ತು ಮಾಡುತ್ತಿದ್ದಾಗ, ಬಾತ್ಮೀದಾರರಿಂದ ಉದಯಗಿರಿ ಠಾಣೆಯ ಸರಹದ್ದು ಮಹದೇವಪುರ ರಸ್ತೆಯಲ್ಲಿರುವ ಪಂಕಜ್ ಪಾನ್ ಬ್ರೋಕರ್ ಅಂಗಡಿ ಮುಂಭಾಗ ಒಂದು ಬಳಿ ಮಾರುತಿ ಒಮಿನಿ ಕಾರಿನಲ್ಲಿ ನಾಲ್ಕು ಜನ ಆಸಾಮಿಗಳು ಅನುಮಾನಾಸ್ಪದವಾಗಿ ಓಡಾಡುತ್ತಿದ್ದಾರೆಂದು ತಿಳಿಸಿದ ಮೇರೆಗೆ ತಕ್ಷಣ ಇವರೆಲ್ಲರೂ ಅಲ್ಲಿಂದ ಹೊರಟು ಸಂಜೆ 4.45 ಗಂಟೆಗೆ ಸದರಿ ಸ್ಥಳಕ್ಕೆ ತೆರಳಿ ಸದರ ಸ್ಥಳದಲ್ಲಿದ್ದ ಒಂದು ಬಿಳಿ ಮಾರುತಿ ಒಮಿನಿ

ನೋಂದಣಿ ಸಂಃ ಕೆಎ/12/ಪಿ-1007 ರಲ್ಲಿ ನಾಲ್ಕು ಆಸಾಮಿಗಳು ಕುಳಿತ್ತಿದ್ದರು. ಇವರುಗಳು ಆ ಕಾರಿನ ಹತ್ತಿರಕ್ಕೆ ಹೋಗುತ್ತಿದಂತೆ ಮಾರುತಿ ವ್ಯಾನನ್ನು ಚಾಲು ಮಾಡಲು ಪ್ರಯತ್ನಿಸಿದರು, ತಕ್ಷಣ ಇವರುಗಳು ಸುತ್ತುವರಿದು ಸದರಿ ಆಸಾಮಿಗಳನ್ನು ವಶಕ್ಕೆ ಪಡೆದು, ವಿಚಾರಿಸಲಾಗಿ ಸೈಯದ್ ವಸೀಂ, ಸಮೀರ್ ಖಾನ್, ಸಮೀಉಲ್ಲಾ ಮತ್ತು ಮುಸ್ತಾಫ ಎಂದು ತಿಳಿಸಿದರು. ವಿಚಾರಣೆಯಿಂದ ಸದರಿ ಆಸಾಮಿಗಳು ಸದರಿ ಸ್ಥಳದಲ್ಲಿ ಇದ್ದ ಬಗ್ಗೆ ಸಮಂಜಸ ಉತ್ತರ ನೀಡದ ಕಾರಣ ಹಾಗೂ ವಿಚಾರಣೆ ಕಾಲದಲ್ಲಿ 1 ಮತ್ತು 2 ನೇ ಆರೋಪಿಗಳು ಠಾಣಾ ಎಂಓಬಿ ಆಸಾಮಿಗಳು ಎಂದು ತಿಳಿದು ಬಂದಿದ್ದರಿಂದ ಅವರುಗಳ ಮೇಲೆ ನಮಗೆ ಅನುಮಾನ ಬಂದಿದ್ದರಿಂದ ಸದರಿ ಸ್ಥಳಕ್ಕೆ ಎ ಎಸ್ ಐ ಜಯಶೀಲನ್ ರವರು ಚಾಸಾ.5 ಮತ್ತು 6 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಸದರಿಯವರಿಗೆ ವಿಚಾರ ತಿಳಿಸಿ ನಂತರ ನಾವುಗಳು ನಮ್ಮ ಅಂಗ ಶೋಧನೆ ಮಾಡಿಕೊಂಡು ತಮ್ಮ ಬಳಿ ಯಾವುದೇ ವಸ್ತುಗಳು ಇಲ್ಲವೆಂದು ಖಚಿತ ಪಡಿಸಿಕೊಂಡ ನಂತರ ಚಾಸಾ.13 ರವರಿಂದ ಆಸಾಮಿಗಳ ಅಂಗ ಶೋಧನೆ ಮಾಡಿಸಿ ನೋಡಿದಾಗ 1 ನೇ ಆರೋಪಿಯ ಬಲಭಾಗದ ಪ್ಯಾಂಟಿನ ಜೇಬಿನಲ್ಲಿ ಒಂದು ಕಾಗದದ ಪೊಟ್ಟಣ ಇದ್ದು ಪರಿಶೀಲಿಸಿದಾಗ 29 ಗ್ರಾಂ ತೂಕದ ಒಂದು ಪ್ಯಾನ್ಸಿ ಸರ, ಪ್ಯಾಂಟಿನ ಎಡಭಾಗದ ಜೇಬಿನಲ್ಲಿ 4 ಚೀಟಿಗಳು ದೊರೆತಿದ್ದು ಪರಿಶೀಲಿಸಿದಾಗ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಹೇಶ್ ಪಾನ್ ಬ್ರೋಕರ್ ನ ಎರಡು ಗಿರಿವಿ ಚೀಟಿಗಳು ಮತ್ತು ಗೀಸು ಲಾಲ್ ಮತ್ತು ಸನ್ಸ್ ಅಂಗಡಿಯ ಎರಡು ಗಿರಿವಿ ಚೀಟಿಗಳು ಆಗಿದ್ದು, ಸದರಿ ಗಿರಿವಿ ಚೀಟಿಗಳಲ್ಲಿ ಚಿನ್ನದ ಪದಾರ್ಥಗಳನ್ನು ಗಿರಿವಿ ಇಟ್ಟಿರುವ ಬಗ್ಗೆ ನಮೂದಾಗಿರುವುದು ಕಂಡು ಬಂತು. 3 ನೇ ಆಸಾಮಿ ಸಮೀ ಉಲ್ಲಾ ಅವರ ಅಂಗ ಶೋಧನೆ ಮಾಡಿದಾಗ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಒಂದು ಕಾಗದದ ಪೊಟ್ಟಣದ ಇದ್ದು ತೆಗೆದು ನೋಡಿದಾಗ 3.100 ಮಿ ಲಿ ತೂಕದ ಒಂದು ಚಿನ್ನದ ಮುತ್ತಿನ ಓಲೆ, ಸುಮಾರು 1.800 ಗ್ರಾಂ ತೂಕದ ಒಂದು ಚಿನ್ನದ ಬಿಳಿ ಹರಳಿನ ಓಲೆ ಮತ್ತು ಪ್ಲೇಟ್, ಸುಮಾರು 2.200 ಗ್ರಾಂ ತೂಕದ ಒಂದು ಚಿನ್ನದ ಮಾಟೀ ಇತ್ತು. 1 ಮತ್ತು 3 ನೇ ಆಸಾಮಿಗಳ ವಶದಲ್ಲಿದ್ದ ಚಿನ್ನದ ಒಡವೆಗಳ ಬಗ್ಗೆ ವಿಚಾರಿಸಿದಾಗ ಸದರಿ ಚಿನ್ನದ ಒಡವೆಗಳನ್ನು ಮೈಸೂರಿನ ಬೆಲವತ್ತದ ಒಂದು ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ. ಗಿರಿವಿ ಚೀಟಿಗಳ ಬಗ್ಗೆ ವಿಚಾರಿಸಿದಾಗ, ಬೆಲವತ್ತದ ಮನೆಗಳಲ್ಲಿ ಕಳ್ಳತನ ಮಾಡಿದ್ದ ಚಿನ್ನದ ಒಡವೆಗಳನ್ನು ಗಿರಿವಿ ಇಟ್ಟಿರುವುದಾಗಿ ತಿಳಿಸಿದರು. ಸದರಿ ಆಸಾಮಿಗಳ ವಶದದಲ್ಲಿದ್ದ ಮಾರುತಿ ಕಾರನ್ನು ಪರಿಶೀಲಿಸಿದಾಗ ಸದರಿ ಕಾರಿನ ಹಿಂಭಾಗದ ಶೀಟಿನ ಕೆಳಭಾಗ ಒಂದು ಪ್ಲಾಸ್ಟಿಕ್ ಕವರನಲ್ಲಿ ಒಂದೂವರೆ ಅಡಿ ಅಳತೆಯ ಉದ್ದದ ಹೆಬ್ಬೆರಳು ಗಾತ್ರದ ಒಂದು ಕಬ್ಬಿಣದ ರಾಡು ಇತ್ತು. ಒಂದು ಕಬ್ಬಿಣ 10 ಇಂಚು ಉದ್ದದ ಚಾಣ ಇತ್ತು. 10 ಇಂಚು ಉದ್ದದ ಸ್ಕ್ರೂ ಡ್ರೈವರ್ ಇದ್ದು ಅದರಲ್ಲಿ ಕೆಂಪು ಹಿಡಿಕೆ ಇದ್ದು ಹಿಡಿಕೆ ಅರ್ಧ ಮುರಿದಿತ್ತು. ಒಂದು ಜೊತೆ ರಬ್ಬರ್ ಹ್ಯಾಂಡ್ ಗ್ಲೌಸ್ ಇತ್ತು. ಸದರಿ ವಸ್ತುಗಳ ಬಗ್ಗೆ

ವಿಚಾರಿಸಿದಾಗ ಸಮಂಜಸ ಉತ್ತರ ನೀಡಿಲಿಲ್ಲ. ಸದರಿ ವಸ್ತುಗಳನ್ನು ಕಳ್ಳತನ ಮಾಡಲು ಉಪಯೋಗಿಸುತ್ತಿದುದ್ದಾಗಿ ಹಾಗೂ ಮಾರುತಿ ಕಾರನ್ನು ಕಳ್ಳತನ ಮಾಡಿದ್ದ ವಸ್ತುಗಳನ್ನು ಸಾಗಾಣಿಕೆ ಮಾಡುವುದಾಗಿ ತಿಳಿಸಿದರು. ಆದ್ದರಿಂದ ಆರೋಪಿ ಮತ್ತು ಮಾಲುಗಳನ್ನು ವಶಪಡಿಸಿಕೊಂಡು ಮುಂದಿನ ಕ್ರಮಕ್ಕಾಗಿ ಸ್ಥಳದಲ್ಲೆ ಮಹಜರು ಬರೆದು ಸಿ ಸಿ ಬಿ ಕಚೇರಿಯ ಪಿ ಐ ರವರು ಮುಂದೆ ಹಾಜರುಪಡಿಸಿದೆವು. ಚಾಸಾ.19 ರವರು ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಈ ಸಂಬಂಧ ಹೇಳಿಕೆಗಳನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಇವರುಗಳು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

14. ಅಭಿಯೋಜನೆಯವರು ಚಾಸಾ.18 ರವರನ್ನು ಪ್ರಾಸಾ.10 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ಮೊಕದ್ದಮೆ ಸಂಖ್ಯೆ 122/11 ರ ದಾಖಲಾತಿಗಳನ್ನು ವರ್ಗಾವಣೆ ಮೇರೆಗೆ ಹಾಜರ್ ಮಾಡಿದ ಬಗ್ಗೆ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ಮೇಟಗಳ್ಳಿ ಪೊಲೀಸ್ ಠಾಣೆ ಮೊಕದ್ದಮೆ ಸಂಃ 122/2011 ಕ್ಕೆ ಸಂಬಂಧಿಸಿದ ಮಾಲು ಮತ್ತು ದಾಖಲಾತಿಗಳನ್ನು ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಪಾಂಡವಪುರ ಪೊಲೀಸ್ ಠಾಣೆ ಮೊಕದ್ದಮೆ ಸಂಃ 233/2011 ಕ್ಕೆ ದಿನಾಂಕ 12.10.2011 ರಂದು ನಮ್ಮ ಠಾಣಾ ಪಿ ಐ ರವರ ಮೌಖಿಕ ಆದೇಶದ ಮೇರೆಗೆ ವರ್ಗಾವಣೆ ನೀಡಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

15. ಅಭಿಯೋಜನೆಯವರು ಚಾಸಾ.10 ರವರನ್ನು ಪ್ರಾಸಾ.12 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಚಾಸಾ 1 ರವರ ಅಂಗಡಿಗೆ ಸಂಸ್ಥೆಗಳ ನೋಂದಣಿ ಪತ್ರ ಕೊಟ್ಟ ಬಗ್ಗೆ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ಚಾಸಾ.1 ರವರು ಪಿ ಎಸ್ ರಸ್ತೆ ಪಾಂಡವಪುರದಲ್ಲಿ ಮಿಸೆಸ್ ನಾಕೋಡ ಜುವೆಲರ್ ಅಂಗಡಿ ನಡೆಸುತ್ತಿದ್ದು, 2009-2010 ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯಿಂದ ನೋಂದಣಿ ಪ್ರಮಾಣಪತ್ರವನ್ನು ದಿನಾಂಕ 13.09.2009 ರಂದು ನೀಡಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

16. ಅಭಿಯೋಜನೆಯವರು ಚಾಸಾ.21 ರವರನ್ನು ಫ್ರಾಸಾ.13 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ಕೇಸನ್ನು ದಾಖಲಿಸಿಕೊಂಡ ಬಗ್ಗೆ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ದಿನಾಂಕಃ 12.05.2011 ರಂದು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ನಿಪಿ 1 ದೂರನ್ನು ಪಡೆದು ಠಾಣಾ ಗುನ್ನೆ ಸಂಖ್ಯೆ 233/2011 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ನಂತರ ಕಡತವನ್ನು ಚಾಸಾ.22 ರವರಿಗೆ ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

17. ಅಭಿಯೋಜನೆಯವರು ಚಾಸಾ.22 ರವರನ್ನು ಫ್ರಾಸಾ.14 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ದಿನಾಂಕ 12.05.2011 ರಂದು ಈ ಪ್ರಕರಣದ ಕಡತವನ್ನು ಚಾಸಾ.21 ರವರಿಂದ ಪಡೆದು ತನಿಖೆ ಮುಂದುವರಿಸಿ, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ.3 ಮತ್ತು 4 ರವರ ಸಮಕ್ಷಮ ಕೃತ್ಯ ಸ್ಥಳದ ಮಹಜರು ಕ್ರಮ ಜರುಗಿಸಿ, ನಂತರ ಕಡತವನ್ನು ಚಾಸಾ.23 ರವರಿಗೆ ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

18. ಅಭಿಯೋಜನೆಯವರು ಚಾಸಾ.20 ರವರನ್ನು ಫ್ರಾಸಾ.15 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ಕೇಸನ್ನು ದಾಖಲಿಸಿಕೊಂಡ ಬಗ್ಗೆ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ದಿನಾಂಕ 14.08.2011 ರಂದು ಬೆಳಿಗ್ಗೆ 9.30 ಗಂಟೆಗೆ ಅರುಳ್ ಬಿನ್ ಸ್ಟ್ಯಾನಿಸ್ ಲಾಸ್ ರವರು ಮೇಟಗಳ್ಳಿ ಠಾಣೆಗೆ ಬಂದು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 122/2011 ರಡಿಯಲ್ಲಿ ಗುನ್ನೆಯನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ನಂತರ ನಮ್ಮ ಠಾಣೆಯ ಪ್ರಕರಣದ ತನಿಖೆಯನ್ನು ನಾನು ಮುಂದುವರಿಸಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

19. ಅಭಿಯೋಜನೆಯವರು ಚಾಸಾ.25 ರವರನ್ನು ಫ್ರಾಸಾ.16 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು ಇವರು ಈ ಪ್ರಕರಣದ ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪ್ರತಿಜ್ಞಾಪೂರ್ವಕ ಹೇಳಿಕೆಯಲ್ಲಿ ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ದಿಃನಾಂಕ 04.07.2011 ರಂದು ಈ ಕೇಸಿನ ಕಡತವನ್ನು ಚಾಸಾ.23 ರವರಿಂದ ಪಡೆದುಕೊಂಡು ಮುಂದಿನ ತನಿಖೆ ನಡೆಸಿ, ಆರೋಪಿ ಮತ್ತು ಮಾಲನ್ನು ಪತ್ತೆ ಮಾಡಲು ಸಿಬ್ಬಂದಿಗಳನ್ನು ನೇಮಕ ಮಾಡಿರುವುದಾಗಿ ನುಡಿದಿರುತ್ತಾರೆ. ದಿನಾಂಕ 12.10.2011 ರಂದು ಚಾಸಾ.24 ರವರು ಮೇಟಗಳ್ಳಿ ಠಾಣೆ ಪ್ರಕರಣ ಗುನ್ನೆ ಸಂಃ 122/2011 ರಲ್ಲಿ ದಸ್ತಗಿರಿ ಮಾಡಿದ್ದ ಆರೋಪಿ ಮತ್ತು ಮಾಲು ಮತ್ತು ದಾಖಲಾತಿಗಳನ್ನು ವರ್ಗಾವಣೆ ನೀಡಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಸುಮಾರು 50 ಗ್ರಾಂ ತೂಕದ ಒಂದು ಲಕ್ಷ್ಮಿ ದೇವರ ಬೆಳ್ಳಿಯ ಮುಖವಾಡ, 40 ಗ್ರಾಂ ತೂಕದ ಒಂದು ಜೊತೆ ಬೆಳ್ಳಿ ದೀಪ, ತಲಾ 20 ಗ್ರಾಂ ತೂಕವಿರುವ ಮೂರು ಜೊತೆ ಬೆಳ್ಳಿಯ ದೀಪಗಳು, ತಲಾ 30 ಗ್ರಾಂ ತೂಕ ಇರುವ ಎರಡು ಜೊತೆ ಬೆಳ್ಳಿ ದೀಪಗಳು, ತಲಾ 20 ಗ್ರಾಂ ತೂಕ ಇರುವ 10 ಕತ್ತಿನ ಚೈನುಗಳು, ತಲಾ 20 ಗ್ರಾಂ ತೂಕ ಇರುವ 5 ಬೆಳ್ಳಿಯ ಕಾಲು ಚೈನುಗಳು, ತಲಾ 25 ಗ್ರಾಂ ತೂಕ ಇರುವ 15 ಜೊತೆ ಬೆಳ್ಳಿಯ ಕಾಲು ಚೈನುಗಳು, ತಲಾ 30 ಗ್ರಾಂ ತೂಕ ಇರುವ ಎರಡು ಜೊತೆ ಬೆಳ್ಳಿಯ ಚೈನುಗಳು, ತಲಾ 25 ಗ್ರಾಂ ತೂಕ ಇರುವ 10 ಜೊತೆ ಬೆಳ್ಳಿಯ ಕಾಲು ಮುರಿಗಳು, ತಲಾ 30 ಗ್ರಾಂ ತೂಕ ಇರುವ 5 ಜೊತೆ ಬೆಳ್ಳಿಯ ಕಾಲುಮುರಿಗಳು, ತಲಾ 20 ಗ್ರಾಂ ತೂಕ ಇರುವ 3 ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 15 ಗ್ರಾಂ ತೂಕ ಇರುವ 5 ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 30 ಗ್ರಾಂ ತೂಕ ಇರುವ 2 ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 15 ಗ್ರಾಂ ತೂಕ ಇರುವ 4 ಜೊತೆ ಬೆಳ್ಳಿಯ ಬಟ್ಟಲುಗಳು. ಸದರಿ ಮಾಲುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ದಿನಾಂಕ 13.10.2011 ರಂದು 1 ರಿಂದ 3 ನೇ ಆರೋಪಿಗಳು ಮೈಸೂರಿನ ಕಾರಾಗೃಹದಲ್ಲಿದ್ದು ಬಾಡಿ ವಾರೆಂಟನ್ನು ಹೊರಡಿಸಲು ಮಾನ್ಯ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ದಿನಾಂಕ 18.10.2011 ರಂದು ಮಾನ್ಯ ನ್ಯಾಯಾಲಯ ಸ್ವತ್ತುಗಳನ್ನು ಅರ್ಜಿದಾರರ ಮಧ್ಯಂತರ ವಶಕ್ಕೆ ನೀಡಲು ಆದೇಶಿಸಿದ್ದು, ಆ ಆದೇಶದಂತೆ ಸ್ವತ್ತು ಪಟ್ಟಿ ಸಂಃ 194/2011 ಕ್ರಮ ಸಂಃ 1 ರಿಂದ 14 ಮಾಲುಗಳನ್ನು ದಿನಾಂಕ 18.10.2011 ರಂದು ಚಾಸಾ.1 ರವರ ಮಧ್ಯಂತರ ವಶಕ್ಕೆ ನೀಡಿ ಸ್ವೀಕೃತಿ ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ನಿಪಿ.3 ಮತ್ತು 4 ರಂತೆ ಫೋಟೋ ತೆಗೆಸಿರುವುದಾಗಿ ನುಡಿದಿರುತ್ತಾರೆ. ದಿನಾಂಕ 25.10.2011 ರಂದು ತನಿಖೆ ಪೂರ್ಣಗೊಂಡ ನಂತರ ದೋಷಾರೋಪಣಾ ಪಟ್ಟಿಯನ್ನು

ಆರೋಪಿಗಳ ವಿರುದ್ದ ಸಲ್ಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಇವರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಒಳಪಟ್ಟಿರುತ್ತಾರೆ.

20. ಅಭಿಯೋಜನೆಯವರು ಹಾಜರುಪಡಿಸಿರುವ ಲಿಖಿತ ಮತ್ತು ಮೌಖಿಕ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ ಈ ನ್ಯಾಯಾಲಯಕ್ಕೆ ಕಂಡುಬಂದಿರುವುದೇನೆಂದರೆ, ಪಾಂಡವಪುರ ಪೋಲೀಸ್ ಠಾಣೆಯ ಠಾಣಾಧಿಕಾರಿ ಹಾಗೂ ಈ ಪ್ರಕರಣದ ತನಿಖಾಧಿಕಾರಿ 3 ಜನ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಪಾಂಡವಪುರ ನ್ಯಾಯಾಲಯದಲ್ಲಿ ದಿನಾಂಕ 15.11.2011 ರಂದು ದಾಖಲಿಸಿದ್ದು 3 ಜನ ಆರೋಪಿಗಳ ವಿರುದ್ಧ ಅಪರಾಧಿಕ ಪ್ರಕರಣ ಸಂಖ್ಯೆ 933/2011 ರಂತೆ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ 03.05.2019 ರ ಆದೇಶದ ಆದೇಶದಂತೆ 3 ನೇ ಆರೋಪಿಯ ವಿರುದ್ಧ ಪ್ರತ್ಯೇಕ ವಿಭಜಿತ ಪ್ರಕರಣ ಸಿ ಸಿ 6/2019 ದಾಖಲಾಗಿರುತ್ತದೆ. 1 ನೇ ಆರೋಪಿಯು ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದ ಮುಂದೆ ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾರೆ. 1 ನೇ ಆರೋಪಿಯ ತಪ್ಪೊಪ್ಪಿಗೆಯನ್ನು ನ್ಯಾಯಾಲಯ ಪುರಸ್ಕರಿಸಿ ಸೂಕ್ತವಾದ ದಂಡನೆಯನ್ನು ದಿನಾಂಕ 28.10.2019 ರ ಆದೇಶದಂತೆ ನೀಡಿರುತ್ತದೆ. 2 ನೇ ಆರೋಪಿಯ ವಿರುದ್ಧ ಬಾಕಿ ಇದ್ದ ಕಡತವನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಜಿಲ್ಲೆ ಆದೇಶ ಸಂಖ್ಯೆ 141/2019 ಆದೇಶದ ದಿನಾಂಕ 11.12.2019, ಈ ಅಪರಾಧಿಕ ಪ್ರಕರಣವನ್ನು ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಪಾಂಡವಪುರ ದಿಂದ ವಾಪಸ್ಸು ತೆಗೆದುಕೊಂಡು ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಈ ಪ್ರಕರಣವನ್ನು ಕಾನೂನು ರೀತ್ಯಾ ಇತ್ಯರ್ಥಪಡಿಸಲು ವರ್ಗಾವಣೆ ಬಂದಿರುತ್ತದೆ. ಕಡತವನ್ನು ಸ್ವೀಕರಿಸಿದ ಈ ನ್ಯಾಯಾಲಯ ಅಪರಾಧಿಕ ಪ್ರಕರಣ ಸಂಖ್ಯೆ 176/2020 ರಂತೆ ನೋಂದಣಿ ಮಾಡಿಕೊಂಡಿರುತ್ತದೆ. 2 ನೇ ಆರೋಪಿಯು ಮಾತ್ರ ಈ ನ್ಯಾಯಾಲಯದ ಮುಂದೆ ವಿಚಾರಣೆಯನ್ನು ಎದುರಿಸಿರುತ್ತಾರೆ. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ ಪಾಂಡವಪುರ ನಗರ ಹಿರೇಮರಳಿ ಸರ್ಕಲ್ ನಲ್ಲಿ ಚಾಸಾ 1 ರವರು ನಾಕೋಡಾ ಜುವೆಲ್ಲರ್ ಇಟ್ಟುಕೊಂಡಿದ್ದು ದಿನಾಂಕ 11.05.2011 ರಂದು ತಮ್ಮ ವ್ಯಾಪಾರ ಮುಗಿಸಿ ರಾತ್ರಿ 7 ಗಂಟೆಗೆ ಅಂಗಡಿ ಬಾಗಿಲನ್ನು ಹಾಕಿಕೊಂಡು ಮನೆಗೆ ಬಂದಿರುತ್ತಾರೆ. ದಿನಾಂಕ 12.05.2011 ರಂದು ಬೆಳಿಗ್ಗೆ 9 ಗಂಟೆಗೆ ಅಂಗಡಿ ತೆರೆಯಲು ಹೋದಾಗ ಅಂಗಡಿ ಬಾಗಿಲು ತೆರೆದಿತ್ತು ಮತ್ತು ಬಾಗಿಲ ಬೀಗವನ್ನು ಮೀಟಿ ಒಳಭಾಗದ ಚೈನ್ ಗೇಟಿಗೆ ಹಾಕಿದ್ದ ಬೀಗವನ್ನು ಹೊಡೆದು ಅಂಗಡಿಯ ಷೋಕೇಸ್‌ಗಳನ್ನು ಹೊಡೆದು ಅಂಗಡಿಯಲ್ಲಿದ್ದ ಬೆಳ್ಳಿ ಚೈನು, ದೀಪ, ಬಟ್ಟಲುಗಳು ಸೇರಿ 1,600 ಗ್ರಾಂ ಹಾಗೂ ನಗದು

ಹಣ 1,500 ರಾತ್ರಿ ವೇಳೆಯಲ್ಲಿ ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ನಿಪಿ 1 ರಂತೆ ಪಾಂಡವಪುರ ಪೊಲೀಸ್ ಠಾಣಾಧಿಕಾರಿಗಳಿಗೆ ಲಿಖಿತ ದೂರು ಕೊಟ್ಟಿರುತ್ತಾರೆ. ನಂತರ, ತನಿಖೆಯನ್ನು ಕೈಗೊಂಡು ಪೊಲೀಸ್ ಅಧಿಕಾರಿಗಳ ತನಿಖೆಯಲ್ಲಿ 1 ರಿಂದ 3 ನೇ ಆರೋಪಿಗಳು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಸಾಕ್ಷ್ಯಾಧಾರಗಳು ಕಂಡುಬಂದಿರುವುದರಿಂದ ಮೂರು ಜನ ಆರೋಪಿಗಳ ವಿರುದ್ಧ ಈ ಪ್ರಕರಣದ ತನಿಖಾಧಿಕಾರಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಆರೋಪಿಗಳಿಗೆ ದೋಷಾರೋಪಣಾ ಪಟ್ಟಿ ಪ್ರತಿಗಳನ್ನು ನೀಡಿ ಅವರ ವಿರುದ್ಧ ಮುಂದುವರೆಯಲು ಸಾಕಷ್ಟು ಸಾಕ್ಷ್ಯಾಧಾರಗಳು ಮೇಲ್ನೋಟಕ್ಕೆ ಕಂಡುಬರುತ್ತಿವೆ ಎಂದು ದೋಷಾರೋಪಣೆಯನ್ನು ರಚಿಸಿ ಆರೋಪಿಗಳಿಗೆ ಕೇಳಿರುವಾಗ ಆರೋಪಿಗಳು ವಿಚಾರಣೆ ಆಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ. 3 ನೇ ಆರೋಪಿ ಆರೋಪಣೆಯನ್ನು ರಚಿಸಿದ ನಂತರ ನಿಯಮಿತವಾಗಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿರುತ್ತಾರೆ. ಆದ್ದರಿಂದ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಪಾಂಡವಪುರ ಅವರ ದಿನಾಂಕ 03.05.2019 ರ ಆದೇಶದಂತೆ ಸಿ ಸಿ 6/2019 ಪ್ರತ್ಯೇಕ ವಿಭಜಿತ ಪ್ರಕರಣ ದಾಖಲಾಗಿರುತ್ತದೆ. 1 ನೇ ಆರೋಪಿಯು ದಿನಾಂಕ 28.10.2019 ರಂದು ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಪಾಂಡವಪುರ ನ್ಯಾಯಾಲಯದ ಮುಂದೆ ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾರೆ. 2 ನೇ ಆರೋಪಿಯ ವಿರುದ್ಧ ಈ ನ್ಯಾಯಾಲಯದ ಮುಂದೆ ಸುದೀರ್ಘ ವಿಚಾರಣೆ ನಡೆಸಿರುತ್ತದೆ. ಈ ಪ್ರಕರಣದ ತನಿಖಾಧಿಕಾರಿ ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸಲು ಆರೋಪ ಪಟ್ಟಿಯಲ್ಲಿ ಚಾಸಾ.1 ರಿಂದ 25 ಸಾಕ್ಷಿದಾರರನ್ನು ತೋರಿಸಿದ್ದು ಅವರುಗಳ ಪೈಕಿ ಆರೋಪವನ್ನು ಸಾಬೀತುಪಡಿಸಲು ಅಭಿಯೋಜನೆಯವರು ಒಟ್ಟು 25 ಸಾಕ್ಷಿದಾರರ ಪೈಕಿ ಫ್ರಾಸಾ 1 ರಿಂದ ಫ್ರಾಸಾ 16 ರವರನ್ನು ವಿಚಾರಣೆಗೊಳಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಹಾಗೂ ತಮ್ಮ ಪರವಾಗಿ ನಿಪಿ.1 ರಿಂದ ನಿಪಿ 12 ದಾಖಲಾತಿಗಳನ್ನು ಮತ್ತು ಮುದ್ದೆಮಾಲು 1 ರಿಂದ 14 ರನ್ನು ಅಭಿಯೋಜನೆಯವರು ಬಹು ಮುಖ್ಯವಾಗಿ ಅವಲಂಬಿಸಿರುತ್ತಾರೆ. ಅಭಿಯೋಜನೆಯವರು ಸಾದರಪಡಿಸಿರುವ ಲಿಖಿತ ಮತ್ತು ಮೌಖಿಕ ಸಾಕ್ಷ್ಯಾಧಾರಗಳನ್ನು ಸಮಗ್ರವಾಗಿ ವಿಶ್ಲೇಷಣೆ ಮಾಡಿದಾಗ ಈ ನ್ಯಾಯಾಲಯಕ್ಕೆ ಕಂಡುಬಂದಿರುವುದೇನೆಂದರೆ, ಚಾಸಾ 1 ಮತ್ತು ಚಾಸಾ 2 ಸಹೋದರರಾಗಿದ್ದು ಅವರು ಕಳೆದ 1995 ನೇ ಇಸವಿಯಿಂದಲೂ ಪಾಂಡವಪುರ ಪೋಲೀಸ್ ಠಾಣೆ ರಸ್ತೆಯಲ್ಲಿ ನಾಕೋಡಾ ಜುವೆಲ್ಲರಿ ಅಂಗಡಿ ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದು ನಿಪಿ 1 ರಲ್ಲಿ ಆರೋಪಿಸಿರುವಂತಹ ಕೃತ್ಯ ದಿನಾಂಕ 11.05.2011 ರಂದು ರಾತ್ರಿ ವೇಳೆಯಲ್ಲಿ ಆಗಿತ್ತು ಎಂದು ಈ ನ್ಯಾಯಾಲಯದ ಮುಂದೆ ನುಡಿದಿರುತ್ತಾರೆ. ದೂರು ನೀಡಿದ 4 ತಿಂಗಳ ನಂತರ ಮೈಸೂರಿನ ಸಿ ಸಿ ಬಿ ಪೋಲೀಸರು ಚಾಸಾ 1

ರವರಿಗೆ ಕರೆಮಾಡಿ ಅವರ ಅಂಗಡಿಯಲ್ಲಿ ಕಳ್ಳತನವಾಗಿದ್ದ ವಸ್ತುಗಳು ಮತ್ತು ಆರೋಪಿಗಳು ಸಿಕ್ಕಿರುತ್ತಾರೆ ಎಂದು ತಿಳಿಸಿದ ನಂತರ ಚಾಸಾ 1 ರವರು ಚಾಸಾ 24 ರವರ ಕಚೇರಿಗೆ ತೆರಳಿ ಆರೋಪಿಗಳನ್ನು ಮತ್ತು ಬೆಳ್ಳಿ ವಸ್ತುಗಳನ್ನು ನೋಡಿ ಗುರ್ತಿಸಿರುವುದಾಗಿ ಹಾಗೂ ಈ ಬಗ್ಗೆ ಚಾಸಾ 24 ರವರ ಮುಂದೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ಕಳುವಾಗಿದ್ದ ಬೆಳ್ಳಿ ವಸ್ತುಗಳನ್ನು ನ್ಯಾಯಾಲಯದ ಮುಖಾಂತರ ಬಿಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಸಿ ಸಿ ಬಿ ಪೋಲೀಸರು ಆ ದಿನ ತೋರಿಸಿದ ಆರೋಪಿಗಳ ಹೆಸರು ಸಯದ್ ವಸೀಂ, ಸಮೀರ್ ಉಲ್ಲಾಖಾನ್ ಮತ್ತು ಸಮೀರ್ ಖಾನ್ ಎಂದು ಆರೋಪಿಗಳನ್ನು ಚಾಸಾ 1 ಮತ್ತು ಚಾಸಾ 2 ರವರು ಗುರುತಿಸಿರುತ್ತಾರೆ. ಮುದ್ದೆ ಮಾಲು 1 ರಿಂದ 14 ಒಡವೆಗಳನ್ನು ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಪಾಂಡವಪುರ ನ್ಯಾಯಾಲಯದ ಮುಂದೆ ಹಾಜರುಪಡಿಸಿ ವಿಚಾರಣಾ ಕಾಲದಲ್ಲಿ ಗುರುತಿಸಿ, ಆ ಒಡವೆಗಳ ಪೋಟೋಗಳನ್ನು ಚಾಸಾ 1 ಮತ್ತು ಚಾಸಾ 2 ರವರು ಹಾಜರುಪಡಿಸಿ ಬೆಳ್ಳಿ ಒಡವೆಗಳನ್ನು ನ್ಯಾಯಾಲಯದ ಮುಂದೆ ಗುರುತಿಸಿರುತ್ತಾರೆ. ಚಾಸಾ 1 ಮತ್ತು ಚಾಸಾ 2 ರವರ ಪಾಟೀ ಸವಾಲಿನಲ್ಲಿ ಒಪ್ಪಿರುವ ಸಂಗತಿಯೇನೆಂದರೆ ಸಿ ಸಿ ಬಿ ಪೋಲೀಸರು ಆರೋಪಿಗಳನ್ನು ತೋರಿಸಿದ ಕಾರಣದಿಂದಾಗಿ ಇದೇ ಆರೋಪಿಗಳು ಕಳ್ಳತನ ಮಾಡಿದ್ದಾರೆಂದು ಹೇಳಿಕೆ ಕೊಟ್ಟಿರುವುದಾಗಿ ಒಪ್ಪಿರುತ್ತಾರೆ. ಅದಕ್ಕೂ ಮೊದಲು ಆರೋಪಿಗಳನ್ನು ಎಲ್ಲಿಯೂ ನೋಡಿಲ್ಲ ಎಂಬುದನ್ನು ಒಪ್ಪಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ಪ್ರ ವ ವರದಿಯನ್ನು ಪಡೆದುಕೊಂಡಾಗ ಒಂದು ದಾಖಲೆಗೆ ಪೋಲೀಸರು ಚಾಸಾ 1 ರವರ ಸಹಿ ಪಡೆದುಕೊಂಡರು ಎಂಬುದನ್ನು ಒಪ್ಪಿರುತ್ತಾರೆ. ನಿಪಿ 2 ನ್ನು ದಿನಾಂಕ 12.05.2011 ರಂದು ಪೋಲೀಸರು ಕೃತ್ಯ ಆಗಿದ್ದ ಸ್ಥಳಕ್ಕೆ ಬಂದು ಇಬ್ಬರು ಪಂಚರ ಸಮಕ್ಷಮ ಜರುಗಿಸಿದರು ಎಂದು ಒಪ್ಪಿರುತ್ತಾರೆ. ಚಾಸಾ 3 ರವರು ನಿಪಿ 2 ಸ್ಥಳ ಪಂಚನಾಮೆಯ ಪಂಚಸಾಕ್ಷಿದಾರರಾಗಿದ್ದು ಅವರು ನ್ಯಾಯಾಲಯದ ಮುಂದೆ ನಿಪಿ 2 ನ್ನು ಪೋಲೀಸ್ ಅಧಿಕಾರಿ ಕೃತ್ಯ ನಡೆದಿದ್ದ ಚಾಸಾ 1 ಮತ್ತು ಚಾಸಾ 2 ರವರ ಅಂಗಡಿ ಬಳಿಗೆ ಬಂದು ಬೆಳಿಗ್ಗೆ 11.30 ರಿಂದ 12.30 ತನಕ ಮಹಜರ್ ಕ್ರಮ ಜರುಗಿಸಿದರು ಎಂದು ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತಾರೆ. 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಚಾಸಾ 3 ರವರು ಒಪ್ಪಿರುವ ಸಂಗತಿಯೇನೆಂದರೆ ನಿಪಿ 2 ನ್ನು ಮಾಡುವ ಪೂರ್ವದಲ್ಲಿ ಪೋಲೀಸರು ನೋಟೀಸು ನೀಡಿರಲಿಲ್ಲ, ನಿಪಿ 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಗೊತ್ತಿಲ್ಲ, ಪೋಲೀಸರ ಕೋರಿಕೆ ಮೇರೆಗೆ ನಿಪಿ 2 ಕ್ಕೆ ಸಹಿ ಮಾಡಿರುವುದಾಗಿ ಒಪ್ಪಿರುತ್ತಾರೆ. ಚಾಸಾ 5 ರಿಂದ ಚಾಸಾ 8 ರವರು ದಿನಾಂಕ 12.09.2011 ರ ಪಂಚನಾಮೆಯ ಪಂಚಸಾಕ್ಷಿದಾರರಾಗಿದ್ದು ಹಾಗೂ ಚಾಸಾ 3 ದಿನಾಂಕ 12.05.2011 ರ ಸ್ಥಳ ಪಂಚನಾಮೆಯ ಪಂಚಸಾಕ್ಷಿದಾರರಾಗಿದ್ದು ಈ ಸಾಕ್ಷಿದಾರರ ವಿರುದ್ಧ ಈ ನ್ಯಾಯಾಲಯ ಸಮನ್ಸ್ ಜಾಮಿನೀಯ ವಾರೆಂಟು, ಜಾಮಿನೀಯವಲ್ಲದ ವಾರೆಂಟು,

ಉದ್ಘೋಷಣೆ ಹಾಗೂ ಆಸ್ತಿ ಜಪ್ತಿ ವಾರೆಂಟುಗಳನ್ನು ಸ್ಥಳೀಯ ಮತ್ತು ಹಿರಿಯ ಪೋಲೀಸ್ ಅಧಿಕಾರಿಗಳ ಮುಖಾಂತರ ಹೊರಡಿಸಿದ್ದು, ಜಾರಿ ಮಾಡಬೇಕಾದ ಏಜೆನ್ಸಿಯವರು ಹಾಗೂ ಅಭಿಯೋಜನೆಯವರು ಈ ನ್ಯಾಯಾಲಯದ ಆದೇಶಿಕೆಯನ್ನು ಕಾರ್ಯಗತಗೊಳಿಸುವಲ್ಲಿ ವಿಫಲರಾದ ಕಾರಣ ಮಾನ್ಯ ಸಹಾಯಕ ಅಭಿಯೋಜಕರ ಮನವಿಯನ್ನು ತಿರಸ್ಕರಿಸಿ ಚಾಸಾ 3, 5 ರಿಂದ 8 ರವರನ್ನು ವಿಚಾರಣೆ ಮಾಡುವುದರಿಂದ ದಿನಾಂಕ 13.01.2025 ರ ಆದೇಶದಂತೆ ಕೈಬಿಡಲಾಗಿರುತ್ತದೆ. ಚಾಸಾ 13 ಮತ್ತು ಚಾಸಾ 14 ರವರನ್ನು ಅಭಿಯೋಜನೆಯವರು ಸ್ವತಃ ವಿಚಾರಣೆ ಮಾಡುವುದರಿಂದ ದಿನಾಂಕ 16.06.2025 ರಂದು ಕೈಬಿಟ್ಟಿರುತ್ತಾರೆ. 2 ನೇ ಆರೋಪಿಯು ತನ್ನ ಪರವಾಗಿ ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತನ್ನ ಅಸಹಾಯಕತೆಯನ್ನು ನ್ಯಾಯಾಲಯದ ಮುಂದೆ ಹೇಳಿಕೊಂಡ ಕಾರಣ ಸಿ ವರಲಕ್ಷ್ಮಿ, ವಕೀಲರು, ಪಾಂಡವಪುರ ರವರನ್ನು ತಾಲ್ಲೂಕು ಕಾನೂನು ಸೇವಾ ಸಮಿತಿ, ಪಾಂಡವಪುರ ವತಿಯಿಂದ ಕಾನೂನಿನ ನೆರವನ್ನು ದಿನಾಂಕ 11.08.2025 ರಂದು ಉಚಿತವಾಗಿ ನೀಡಲಾಗಿತ್ತು. ತದನಂತರ ಕರ್ನಾಟಕ ರಾಜ್ಯ ಕಾನೂನು ಸೇವಾ ಸಮಿತಿ ರವರ ಆದೇಶದ ಮೇರೆಗೆ ಮಂಡ್ಯ ಜಿಲ್ಲೆಯಾದ್ಯಂತ ಆರೋಪಿಗಳ ಪರವಾಗಿ ವಕೀಲರನ್ನು ನೇಮಿಸಿದ ಕಾರಣ ಎ ಶ್ವೇತ, ವಕೀಲರು ಎಂಬುವವರನ್ನು ಆರೋಪಿಯ ಪರವಾಗಿ ದಿನಾಂಕ 12.11.2025 ರಂದು ಸರ್ಕಾರದಿಂದ ಉಚಿತವಾಗಿ ನೇಮಿಸಿಕೊಡಲಾಯಿತು. ಫ್ರಾಸಾ 1 ರಿಂದ 3, ಮತ್ತು 6 ರಿಂದ 11 ರವರನ್ನು ಪಾಟೀ ಸವಾಲು ಮಾಡಲು ಪುನಃ ಕರೆಸಬೇಕೆಂದು ಆರೋಪಿ ಪರ ವಕೀಲರು ದಂಡ ಪ್ರಕಿಯಾ ಸಂಹಿತೆ ಕಲಂ 311 ರಡಿ ಅರ್ಜಿಯನ್ನು ಸಲ್ಲಿಸಿದ ಮೇರೆಗೆ ಆ ಅರ್ಜಿಯನ್ನು ದಿನಾಂಕ 12.11.2025 ರಂದು ಪುರಸ್ಕರಿಸಿ ಪುನಃ ಫ್ರಾಸಾ 1 ರಿಂದ 3, ಮತ್ತು 6 ರಿಂದ 11 ರವರನ್ನು ಪಾಟೀ ಸವಾಲಿಗೆ ಕರೆಸಲು ಆದೇಶಿಸಲಾಯಿತು. ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಅಭಿಯೋಜನೆಯವರು ಚಾಸಾ 2/ಫ್ರಾಸಾ2, ಚಾಸಾ 4/ಫ್ರಾಸಾ 3, ಚಾಸಾ 16/ಫ್ರಾಸಾ 6, ಚಾಸಾ 11/ಫ್ರಾಸಾ 8 ಮತ್ತು ಚಾಸಾ 18/ಫ್ರಾಸಾ 10 ರವರುಗಳನ್ನು ನ್ಯಾಯಾಲಯದ ಮುಂದೆ ಹಾಜರಿಟ್ಟಿರುತ್ತಾರೆ. ಅವರುಗಳನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ, ಆದರೆ ಫ್ರಾಸಾ 7, ಫ್ರಾಸಾ 9, ಫ್ರಾಸಾ 11, ಚಾಸಾ 23 ಮತ್ತು ಚಾಸಾ 24 ರವರುಗಳ ವಿರುದ್ಧ ಈ ನ್ಯಾಯಾಲಯ ಸಮನ್ಸ್, ಜಾಮಿನೀಯ ವಾರೆಂಟು, ಜಾಮಿನೀಯವಲ್ಲದ ವಾರೆಂಟು, ಉದ್ಘೋಷಣೆ ಹಾಗೂ ಆಸ್ತಿ ಜಪ್ತಿ ವಾರೆಂಟುಗಳನ್ನು ಸ್ಥಳೀಯ ಮತ್ತು ಹಿರಿಯ ಪೋಲೀಸ್ ಅಧಿಕಾರಿಗಳ ಮುಖಾಂತರ ಹೊರಡಿಸಿದ್ದು, ಜಾರಿ ಮಾಡಬೇಕಾದ ಏಜೆನ್ಸಿಯವರು ಹಾಗೂ ಅಭಿಯೋಜನೆಯವರು ಈ ನ್ಯಾಯಾಲಯದ ಆದೇಶಿಕೆಯನ್ನು ಕಾರ್ಯಗತಗೊಳಿಸುವಲ್ಲಿ ವಿಫಲರಾದ ಕಾರಣ ಮಾನ್ಯ ಸಹಾಯಕ ಅಭಿಯೋಜಕರ ಮನವಿಯನ್ನು ತಿರಸ್ಕರಿಸಿ ಫ್ರಾಸಾ 7, ಫ್ರಾಸಾ 9 ಮತ್ತು ಫ್ರಾಸಾ 11

ರವರ ಮುಖ್ಯ ವಿಚಾರಣೆಯನ್ನು ತೊಡೆದುಹಾಕಲಾಯಿತು ಅಥವಾ ಅಳಿಸಿ ಹಾಕಲಾಯಿತು. ಅವರುಗಳು ಪಾಟೀ ಸವಾಲಿಗೆ ಹಾಜರಾಗಲಿಲ್ಲ ಎಂದು ಅವರ ಮುಖ್ಯ ವಿಚಾರಣೆಯನ್ನು ದಿನಾಂಕ 09.03.2026 ರ ಆದೇಶದಂತೆ ಅಳಿಸಿ ಹಾಕಲಾಯಿತು ಹಾಗೂ ಚಾಸಾ 23 ಮತ್ತು ಚಾಸಾ 24 ರವರನ್ನು ಅಭಿಯೋಜನೆಯವರು ಕ್ಲಪ್ತ ಸಮಯದಲ್ಲಿ ಹಾಜರಿಟ್ಟು ವಿಚಾರಣೆ ಮಾಡಿಕೊಳ್ಳಲಿಲ್ಲ ಎನ್ನುವ ಕಾರಣಕ್ಕಾಗಿ ಚಾಸಾ 23 ಮತ್ತು ಚಾಸಾ 24 ರವರನ್ನು ದಿನಾಂಕ 18.03.2026 ರ ಆದೇಶದಂತೆ ವಿಚಾರಣೆ ಮಾಡುವುದರಿಂದ ಕೈಬಿಡಲಾಗಿರುತ್ತದೆ. ಚಾಸಾ 23 ಮತ್ತು ಚಾಸಾ 24 ರವರು ಈ ಪ್ರಕರಣದ ತನಿಖೆಯನ್ನು ನಡೆಸಿರುವ ಪೋಲೀಸ್ ಅಧಿಕಾರಿ ಸಾಕ್ಷಿದಾರರಾಗಿದ್ದು ಅವರುಗಳು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯದೇ ಇರುವುದರಿಂದ ಅಭಿಯೋಜನೆ ಪ್ರಕರಣಕ್ಕೆ ಮಾರಕ ಉಂಟಾಗಿದೆ. ಫ್ರಾಸಾ 7, ಫ್ರಾಸಾ 9 ಮತ್ತು ಫ್ರಾಸಾ 11 ರವರೂ ಸಹ ಪೋಲೀಸ್ ಅಧಿಕಾರಿ ಸಾಕ್ಷಿದಾರರಾಗಿದ್ದು ಅವರುಗಳು ಕ್ಲಪ್ತ ಸಮಯದಲ್ಲಿ ಪಾಟೀ ಸವಾಲಿಗೆ ಒಳಪಡಲು ನ್ಯಾಯಾಲಯಕ್ಕೆ ಹಾಜರಾಗದೇ ಇರುವುದರಿಂದ ಅವರ ವಿರುದ್ಧ ತದ್ವಿರುದ್ಧ ಆದೇಶವನ್ನು ನ್ಯಾಯಾಲಯ ಹೊರಡಿಸಿರುವುದರಿಂದ ಅಭಿಯೋಜನೆ ಪ್ರಕರಣಕ್ಕೆ ಮಾರಕ ಉಂಟಾಗಿದೆ. ಫ್ರಾಸಾ 7, ಫ್ರಾಸಾ 9 ಮತ್ತು ಫ್ರಾಸಾ 11 ರವರ ಮುಖ್ಯ ವಿಚಾರಣೆಯನ್ನು ದಿನಾಂಕ 09.03.2026 ರಂದು ಆಗಿರುವ ಆದೇಶದಿಂದಾಗಿ ಈ ನ್ಯಾಯಾಲಯ ಅವರುಗಳ ಮೌಖಿಕ ಸಾಕ್ಷ್ಯವನ್ನು ಪರಿಗಣಿಸಬೇಕಾದ ಅಗತ್ಯತೆ ಇರುವುದಿಲ್ಲ. ಚಾಸಾ 9/ಫ್ರಾಸಾ 4 ರವರು ನಿಪಿ 5 ಜಪ್ತಿ ಪಂಚನಾಮೆಯ ಪಂಚಸಾಕ್ಷಿದಾರರಾಗಿದ್ದು ನಿಪಿ 5 ಕ್ಕೆ ಅವರ ಅಂಗಡಿ ಹತ್ತಿರ ಪೋಲೀಸರು ಈಗ್ಗೆ 10 ವರುಷಗಳ ಹಿಂದೆ ಸಹಿ ಪಡೆದುಕೊಂಡರು ಎಂದು ಸಹಿಯನ್ನು ಗುರುತಿಸಿ ಸಾಕ್ಷಿ ನುಡಿದಿದ್ದು, ಜಪ್ತಿ ಮಾಡಿದ್ದಾರೆ ಎನ್ನಲಾದ ಒಡವೆಗಳನ್ನು ಅವರು ಈ ಹಿಂದೆ ನೋಡಿಲ್ಲ ಹಾಗೂ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ, ಪ್ರಕರಣದ ವಿಚಾರಗಳು ಗೊತ್ತಿಲ್ಲ, ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿರುತ್ತಾರೆ. ಮಾನ್ಯ ಸಹಾಯಕ ಅಭಿಯೋಜಕರು ಈ ಸಾಕ್ಷಿದಾರರನ್ನು ದೀರ್ಘ ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಸಾಕ್ಷ್ಯವನ್ನು ಈ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನುಡಿದಿರುವುದಿಲ್ಲ. ಚಾಸಾ 17/ಫ್ರಾಸಾ 5, ಚಾಸಾ 16/ಫ್ರಾಸಾ 6 ಮತ್ತು ಚಾಸಾ 11/ಫ್ರಾಸಾ 8 ರವರುಗಳು ಸಿ ಸಿ ಬಿ ಘಟಕ, ಮೈಸೂರು ಜಿಲ್ಲೆಯಲ್ಲಿ ದಿನಾಂಕ 12.09.2011 ರಂದು ಕರ್ತವ್ಯದಲ್ಲಿರುವಾಗ ಮೈಸೂರು ನಗರದ ಮೇಟಗಳ್ಳಿ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 122/2011 ಪ್ರಕರಣದ ಆರೋಪಿ ಮತ್ತು ಮಾಲುಗಳನ್ನು ಪತ್ತೆ ಮಾಡುತ್ತಿದ್ದ ಕರ್ತವ್ಯದಲ್ಲಿರುವಾಗ ಮಹದೇವಪುರ ರಸ್ತೆಯಲ್ಲಿರುವ ಪಂಕಜ್ ಪಾನ್ ಬ್ರೋಕರ್ ಅಂಗಡಿ ಮುಂಭಾಗ ಒಂದು ಬಿಳಿ ಓಮಿನಿ ಕಾರಿನಲ್ಲಿ 4 ಜನ ಆಸಾಮಿಗಳು ಅನುಮಾನಾಸ್ಪದವಾಗಿ

ಓಡಾಡುತ್ತಿದ್ದರು. ಅವರನ್ನು ಪರಿಶೀಲಿಸಿ ನೋಡಿದಾಗ ಅವರ ಹೆಸರು ಸೈಯದ್ ವಸೀಂ, ಸಮೀರ್ ಖಾನ್, ಸಮೀರ್ ಉಲ್ಲಾ ಮತ್ತು ಮುಸ್ತಾಪ ಎಂದು ತಿಳಿಸಿದರು, ಅವರುಗಳು ಹಳೇ ಎಂ ಓ ಬಿ ಆಸಾಮಿಗಳೆಂದು ಖಚಿತಪಡಿಸಿಕೊಂಡು ಇಬ್ಬರು ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರುಗಳ ಅಂಗಶೋಧನೆ ಮಾಡಿದಾಗ ಬೆಳ್ಳಿ ಒಡವೆಗಳು ಹಾಗೂ ಗಿರವಿ ಚೀಟಿಗಳು ಸಿಕ್ಕವು ಹಾಗೂ ಕಾರಿನ ಒಳಗಡೆ ಹೆಬ್ಬೆರಳು ಗಾತ್ರದ ಕಬ್ಬಿಣದ ರಾಡು, 10 ಇಂಟು ಉದ್ದದ ಸ್ಕ್ರೂ ಡ್ರೈವರ್, ಒಂದು ಜೊತೆ ರಬ್ಬರ್ ಹ್ಯಾಂಡ್ ಗ್ಲೋವ್ಸ್‌ಗಳನ್ನು ನಿಪಿ 5 ರಂತೆ ಮಹಜರ್ ಬರೆದು ಅಮಾನತ್ತುಪಡಿಸಿಕೊಂಡು ಸಿಕ್ಕ ಮಾಲು ಮತ್ತು ಆರೋಪಿಗಳೊಂದಿಗೆ ಕಚೇರಿಗೆ ಹಿಂದಿರುಗಿ ಚಾಸಾ 19 ರವರು ನಿಪಿ 7 ರಂತೆ ವರದಿಯನ್ನು ನೀಡಿದರು ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ನ್ಯಾಯಾಲಯದ ಮುಂದೆ ನುಡಿದಿರುತ್ತಾರೆ. ಇವರುಗಳ ಪಾಟೀ ಸವಾಲಿನಲ್ಲಿ ಇವರುಗಳೆಲ್ಲರೂ ಒಪ್ಪಿರುವ ಸಂಗತಿಯೇನೆಂದರೆ ಹಿರಿಯ ಅಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ದಿನಾಂಕ 12.09.2011 ರಂದು ಕರ್ತವ್ಯ ನಿರ್ವಹಿಸಿರುವುದಾಗಿ ಒಪ್ಪಿರುತ್ತಾರೆ. ಸಿಕ್ಕ ಒಡವೆಗಳು ಚಿನ್ನದ ಒಡವೆಗಳೆಂದು ಪಂಕಜ್ ಪಾನ್ ಬ್ರೋಕರ್ ರವರು ತಿಳಿಸಿದರು ಈ ವಿಚಾರವನ್ನು ನ್ಯಾಯಾಲಯದ ಮುಂದೆ ಪ್ರಥಮವಾಗಿ ಹೇಳುತ್ತಿರುವುದಾಗಿ ಒಪ್ಪಿರುತ್ತಾರೆ. ಚಾಸಾ 19 ರವರು ಸಿಕ್ಕ ಮಾಲುಗಳನ್ನು ತೂಕ ಮಾಡಿಸಿಕೊಂಡು ಬರಲು ಪಾನ್ ಬ್ರೋಕರ್ ಅಂಗಡಿಗೆ ಹೋಗಿದ್ದರು ಎಂಬುದನ್ನು ಒಪ್ಪಿರುತ್ತಾರೆ. ಪಂಚರುಗಳಿಗೆ ನಿಪಿ 5 ನ್ನು ಮಾಡುವ ಪೂರ್ವದಲ್ಲಿ ನೋಟೀಸು ಕೊಟ್ಟಿದ್ದರೋ ಇಲ್ಲವೋ ಗೊತ್ತಿಲ್ಲ ಎಂದು ಒಪ್ಪಿರುತ್ತಾರೆ. ತನಿಖೆ ನಡೆಸಲು ಅಧಿಕಾರ ಇತ್ತು ಎಂದು ಸಾಧಿಸಿರುತ್ತಾರೆ. ಸ್ಥಳೀಯ ಪೋಲೀಸರಿಗೆ ಮಾಹಿತಿ ನೀಡಲಿಲ್ಲ ಮತ್ತು ಸಿ ಸಿ ಬಿ ಪೋಲೀಸರಾಗಿರುವುದರಿಂದ ಮೈಸೂರು ಜಿಲ್ಲಾ ವ್ಯಾಪ್ತಿಯೊಳಗೆ ತನಿಖೆ ನಡೆಸಲು ಅಧಿಕಾರ ಇರುತ್ತದೆ ಎಂದು ಸಾಧಿಸಿರುತ್ತಾರೆ. ಚಾಸಾ 19 ರವರು ನೀಡಿದ ಉಕ್ತಲೇಖನದ ಮೇರೆಗೆ ನಿಪಿ 7 ನ್ನು ಚಾಸಾ 17 ರವರು ಬರೆದಿರುವುದಾಗಿ ಒಪ್ಪಿರುತ್ತಾರೆ. ಚಾಸಾ 16 ರವರು ಒಪ್ಪಿರುವ ಸಂಗತಿಯೇನೆಂದರೆ ಸಿಕ್ಕ ಒಡವೆಗಳು ಚಿನ್ನದ ಒಡವೆಗಳೆಂದು ಮಾರವಾಡಿಗಳು ತಿಳಿಸಿದರು, ಗಿರವಿ ಚೀಟಿಗಳು ಯಾರ ಯಾರ ಹೆಸರಿನಲ್ಲಿದ್ದವು ಎಂದು ಹೇಳಲು ಜ್ಞಾಪಕವಿಲ್ಲ ಎಂದು ಒಪ್ಪಿರುತ್ತಾರೆ. ಚಾಸಾ 11 ರವರು ಗಿರವಿ ಚೀಟಿಗಳನ್ನು ಠಾಣೆಯಲ್ಲಿ ಹಾಜರುಪಡಿಸಿರುವುದಾಗಿ ಒಪ್ಪಿರುತ್ತಾರೆ. ಚಾಸಾ 18 ರವರು ಸಿ ಸಿ ಬಿ ಕಚೇರಿಯಲ್ಲಿ ಕರ್ತವ್ಯ ಮಾಡುತ್ತಿದ್ದ ಪೋಲೀಸ್ ಅಧಿಕಾರಿ ಸಾಕ್ಷಿದಾರರಾಗಿದ್ದು ದಿನಾಂಕ 12.10.2011 ರಂದು ಅವರ ಠಾಣಾ ಪಿ ಐ ರವರ ಮೌಖಿಕ ಆದೇಶದ ಮೇರೆಗೆ ಮೇಟಗಳ್ಳಿ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 122/2011 ಕ್ಕೆ ಸಂಬಂಧಿಸಿದ ಮಾಲು ಮತ್ತು ದಾಖಲೆಗಳನ್ನು ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಪಾಂಡವಪುರ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 233/2011 ಪ್ರಕರಣದಲ್ಲಿ ವರ್ಗಾವಣೆ ನೀಡಿರುವುದಾಗಿ ನಿಪಿ 8 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಹಾಗೂ ನಿಪಿ 3 ಮತ್ತು ನಿಪಿ 4

ರಲ್ಲಿರುವ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ 10/ಫ್ರಾಸಾ 12 ರವರು ಪಾಂಡವಪುರ ತಾಲ್ಲೂಕಿನಲ್ಲಿ ಕಾರ್ಮಿಕ ನಿರೀಕ್ಷಕಿಯಾಗಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯಾಗಿದ್ದು ಅವರು ಚಾಸಾ 1 ರವರಿಗೆ ಮಿಸೆಸ್ ನಾಕೋಡಾ ಜ್ಯುವೆಲರ್ ಅಂಗಡಿ ನಡೆಸಲು 2009-10 ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯಿಂದ ನೋಂದಣಿ ಪ್ರಮಾಣಪತ್ರ ನೀಡಿರುವುದಾಗಿ ನಿಪಿ 10 ನ್ನು ಪುಷ್ಟೀಕರಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅವರ ಪಾಟೀ ಸವಾಲಿನಲ್ಲಿ ಪ್ರತಿಯೊಂದು ಅಂಗಡಿಯೂ ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಬೇಕೆಂದು ಕಾನೂನು ಇರುವುದರಿಂದ ನಿಪಿ 10 ನ್ನು ಕೊಟ್ಟಿರುವುದಾಗಿ ಒಪ್ಪಿರುತ್ತಾರೆ. ಚಾಸಾ 21 ರವರು ಪಾಂಡವಪುರ ಪೋಲೀಸ್ ಠಾಣೆಯ ಪೋಲೀಸ್ ಅಧಿಕಾರಿ ಸಾಕ್ಷಿದಾರರಾಗಿದ್ದು ದಿನಾಂಕ 12.05.2011 ರಂದು ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ನೀಡಿದ ನಿಪಿ 1 ನ್ನು ಸ್ವೀಕರಿಸಿ ಕಾನೂನು ನಿರ್ದೇಶಿಸುವಂತೆ ಅಪರಾಧಿಕ ಪ್ರಕರಣ ದಾಖಲಿಸಿಕೊಂಡು ಪ್ರ ವ ವರದಿ ತಯಾರಿಸಿ ನಂತರದ ಪ್ರಕ್ರಿಯೆಗಳನ್ನು ಪಾಲಿಸಿರುವುದಾಗಿ ನುಡಿದಿರುತ್ತಾರೆ. ನಿಪಿ 1 ನ್ನು ಚಾಸಾ 1 ರವರ ಪ್ರಭಾವಕ್ಕೊಳಪಟ್ಟು ಹಾಗೂ ಅವರಿಗೆ ಅನುಕೂಲ ಮಾಡಿಕೊಡಲು ಸ್ವೀಕರಿಸಿ ಪ್ರಕರಣ ದಾಖಲಿಸಿರುತ್ತೀರಾ ಎನ್ನುವ ಸಲಹೆಯನ್ನು ಸಂಪೂರ್ಣ ಸುಳ್ಳು ಎಂದು ಸಾಧಿಸಿರುತ್ತಾರೆ. ಚಾಸಾ 22 ರವರು ಈ ಪ್ರಕರಣದ ಭಾಗಶಃ ತನಿಖಾಧಿಕಾರಿ ಆಗಿದ್ದು ಇವರು ದಿನಾಂಕ 12.05.2011 ರಂದು ಕೃತ್ಯ ಸ್ಥಳದ ಪಂಚನಾಮೆಯನ್ನು ಚಾಸಾ 3 ಮತ್ತು ಚಾಸಾ 4 ರವರ ಸಮಕ್ಷಮ ಜರುಗಿಸಿರುವುದಾಗಿ ನುಡಿದಿರುತ್ತಾರೆ. ಇವರು ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಒಪ್ಪಿದ ಸಂಗತಿಯೇನೆಂದರೆ ಪಂಚನಾಮೆ ಮಾಡಿಸುವಾಗ ಪೋಟೋ ತೆಗೆಸಿಲ್ಲ, ನಿಪಿ 2 ರ ಕೈಬರವಣಿಗೆ ಅವರ ಠಾಣೆಯ ಸಿಬ್ಬಂದಿಯದು, ವಾಸದ ಮನೆಯ ಬಾಗಿಲನ್ನು ಮೀಟಿದ್ದರು ಎಂದು ತೋರಿಸುವ ಯಾವುದೇ ಪೋಟೋ ಮತ್ತು ವೀಡಿಯೋ ಹಾಜರುಪಡಿಸಿಲ್ಲ ಎಂದು ಒಪ್ಪಿರುತ್ತಾರೆ. ಪಂಚರುಗಳಿಗೆ ನಿಪಿ 2 ನ್ನು ಮಾಡುವ ಪೂರ್ವದಲ್ಲಿ ನೋಟೀಸು ನೀಡಿಲ್ಲ ಎಂದು ಒಪ್ಪಿರುತ್ತಾರೆ. ಚಾಸಾ 20 ರವರು ಮೇಟಗಳ್ಳಿ ಪೋಲೀಸ್ ಠಾಣೆಯ ಅಂದಿನ ಪಿ ಎಸ್ ಐ ಆಗಿದ್ದು ದಿನಾಂಕ 14.08.2011 ರಂದು ಅರುಳ್ ಬಿನ್ ಸ್ಟಾನ್ಸ್ ಲಾಸ್ ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 122/2011 ರಂತೆ ಪ್ರಕರಣ ದಾಖಲಿಸಿಕೊಂಡು ನಂತರದ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಿರುವುದಾಗಿ ಒಪ್ಪಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಪಾಂಡವಪುರ ಪೋಲೀಸ್ ಠಾಣೆ ಪ್ರಕರಣದ ಬಗ್ಗೆ ಗೊತ್ತಿದೆ ಎಂದು ಸಾಧಿಸಿರುತ್ತಾರೆ. ಚಾಸಾ 25 ರವರು ಈ ಪ್ರಕರಣದ ತನಿಖೆಯನ್ನು ನಡೆಸಿ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುವ ಪೋಲೀಸ್ ಅಧಿಕಾರಿ ಸಾಕ್ಷಿದಾರರಾಗಿದ್ದು ಇವರು ತಮ್ಮ ತನಿಖಾ ಕಾಲದಲ್ಲಿ ನಡೆಸಿರುವ ತನಿಖಾ ಸ್ವರೂಪದ ಬಗ್ಗೆ ವಿವರವಾಗಿ ಸಾಕ್ಷ್ಯ ನೀಡಿರುತ್ತಾರೆ. ಚಾಸಾ 24 ರವರು ಮೇಟಗಳ್ಳಿ ಠಾಣಾ ಪ್ರಕರಣ ಸಂಖ್ಯೆ

122/2011 ರಲ್ಲಿ ದಸ್ತಗಿರಿ ಮಾಡಿದ್ದ ಆರೋಪಿ, ಮಾಲು ಮತ್ತು ದಾಖಲಾತಿಗಳನ್ನು ಸ್ವೀಕರಿಸಿರುವುದಾಗಿ ನುಡಿದಿರುತ್ತಾರೆ. ಸ್ವೀಕರಿಸಿದ ಬೆಳ್ಳಿಯ ಒಡವೆಗಳನ್ನು ಸ್ವತ್ತುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. 1 ರಿಂದ 3 ನೇ ಆರೋಪಿಗಳ ವಿರುದ್ಧ ಬಾಡಿ ವಾರೆಂಟು ಹೊರಡಿಸಲು ಮಾನ್ಯ ನ್ಯಾಯಾಲಯಕ್ಕೆ ಕೋರಿಕೆ ಅರ್ಜಿ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಮಾನ್ಯ ನ್ಯಾಯಾಲಯದ ಆದೇಶದಂತೆ ದಿನಾಂಕ 18.10.2011 ರಂದು ಮುದ್ದೆ ಮಾಲು 1 ರಿಂದ 14 ಮಾಲುಗಳನ್ನು ಚಾಸಾ 1 ರವರ ಮಧ್ಯಂತರ ವಶಕ್ಕೆ ಬಿಟ್ಟುಕೊಟ್ಟು ಸ್ವೀಕೃತಿ ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ನಂತರ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. 2 ನೇ ಆರೋಪಿ ಪರ ವಕೀಲರು ನೀಡಿರುವ ಪ್ರತಿಯೊಂದು ಸಲಹೆಯನ್ನು ಸುಳ್ಳು ಎಂದು ಸಾಧಿಸಿರುತ್ತಾರೆ. ಈ ನ್ಯಾಯಾಲಯ ಈ ಮೇಲೆ ಚರ್ಚಿಸಿರುವ ಸಾಕ್ಷ್ಯಾಧಾರಗಳ ವಿಶ್ಲೇಷಣೆ ಹಾಗೂ ಚರ್ಚಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗುವುದೇನೆಂದರೆ ಈ ಪ್ರಸ್ತುತ ಪ್ರಕರಣದ ಆರೋಪಿಗಳನ್ನು ಚಾಸಾ 11 ರಿಂದ ಚಾಸಾ 17 ರವರು ಪ್ರಥಮವಾಗಿ ಪತ್ತೆಹಚ್ಚಿ ಅವರ ಬಳಿ ಇದ್ದ ಮಾಲುಗಳ ಸಮೇತ ಆರೋಪಿಗಳನ್ನು ತಂದು ಚಾಸಾ 23 ರವರ ಮುಂದೆ ಹಾಜರುಪಡಿಸಿ ಚಾಸಾ 19 ರವರು ಒಂದು ಲಿಖಿತ ವರದಿಯನ್ನು ಸಲ್ಲಿಸಿರುತ್ತಾರೆ. ಚಾಸಾ 12 ರಿಂದ 17 ಮತ್ತು ಚಾಸಾ 19 ರವರು ಆರೋಪಿಗಳನ್ನು ತಮ್ಮ ವಶಕ್ಕೆ ಪಡೆದುಕೊಳ್ಳುವ ಸಮಯದಲ್ಲಿ ಇಬ್ಬರು ಪಂಚಸಾಕ್ಷಿದಾರರ ಸಮಕ್ಷಮ ನಿಪಿ 7 ರಂತೆ ಮಹಜರ್ ಕ್ರಮ ಜರುಗಿಸಿ ಅವರ ವಶದಲ್ಲಿದ್ದ ವಸ್ತುಗಳ ಸಮೇತ 4 ಜನ ಆರೋಪಿಗಳನ್ನು ಅವರ ವಶಕ್ಕೆ ಪಡೆದುಕೊಂಡಿರುತ್ತಾರೆ. ತದನಂತರ ತನಿಖೆ ನಡೆಸಿದ ತನಿಖಾಧಿಕಾರಿ ಚಾಸಾ 24 ರವರು ಆರೋಪಿಗಳು ನೀಡಿದ ಸ್ವಇಚ್ಚಾ ಹೇಳಿಕೆಯ ಮೇರೆಗೆ ಈ ಪ್ರಸ್ತುತ ಪ್ರಕರಣದಲ್ಲಿ 3 ಜನ ಆರೋಪಿಗಳು ಪಾಲ್ಗೊಂಡಿದ್ದಾರೆ ಎಂದು ಸಂಬಂಧಪಟ್ಟ ಮಾಲುಗಳನ್ನು ಹಾಗೂ ದಾಖಲಾತಿಗಳನ್ನು ವರ್ಗಾವಣೆ ನೀಡಿ ನಂತರ ಚಾಸಾ 25 ರವರು ಚಾಸಾ 24 ರವರು ನೀಡಿದ ದಾಖಲಾತಿಗಳ ಆಧಾರದಲ್ಲಿ ಈ ಪ್ರಸ್ತುತ ಪ್ರಕರಣದಲ್ಲಿ 3 ಜನ ಆರೋಪಿಗಳ ವಿರುದ್ಧ ದಾಖಲಿಸಿರುತ್ತದೆ. ಚಾಸಾ 12 ರಿಂದ 17 ಮತ್ತು ಚಾಸಾ 19 ರವರ ಪೈಕಿ ಫ್ರಾಸಾ 7, ಫ್ರಾಸಾ 9 ಮತ್ತು ಫ್ರಾಸಾ 11 ರವರು ಆರೋಪಿ ಪರ ವಕೀಲರು ಸಲ್ಲಿಸಿದ ಅರ್ಜಿಯ ಆಧಾರದಲ್ಲಿ ಅವರುಗಳನ್ನು ಪಾಟೀ ಸವಾಲಿಗಾಗಿ ಪುನಃ ಕರೆಸಬೇಕೆಂದು ಮಾಡಿದ ಆದೇಶದ ನಂತರ ಅವರುಗಳು ಪಾಟೀ ಸವಾಲಿಗೆ ಒಳಪಡಲು ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ. ಆದ್ದರಿಂದ ಅವರ ಸಾಕ್ಷ್ಯವನ್ನು ದಿನಾಂಕ 09.03.2026 ರ ಆದೇಶದಂತೆ ಅಳಿಸಿಹಾಕಲಾಗಿರುತ್ತದೆ. ಅವರುಗಳ ಅಪೂರ್ಣ ಸಾಕ್ಷ್ಯ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿರುವುದಿಲ್ಲ. ಉಳಿದಂತೆ ಪೋಲೀಸ್ ಅಧಿಕಾರಿಗಳು ನುಡಿದಿರುವ ಸಾಕ್ಷ್ಯದಲ್ಲಿ ಅವರುಗಳು ನಿಪಿ 7 ನ್ನು ಬರೆದಾಗ ಆರೋಪಿಗಳು ಗಿರವಿ

ಇಟ್ಟಿದ್ದ ರಸೀದಿಗಳನ್ನು ಜಪ್ತಿ ಮಾಡಿರುವುದಾಗಿ ನುಡಿದಿದ್ದು, ಆ ಗಿರವಿ ರಸೀದಿಗಳನ್ನು ಈ ನ್ಯಾಯಾಲಯದ ಮುಂದೆ ತನಿಖಾಧಿಕಾರಿ ಹಾಜರುಪಡಿಸಿರುವುದಿಲ್ಲ. ಚಾಸಾ 23 ಮತ್ತು ಚಾಸಾ 24 ರವರು ಈ ಆರೋಪಿಗಳ ಮೇಲಿನ ಆರೋಪವನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಲು ಅತ್ಯಂತ ಬಹುಮುಖ್ಯ ಸಾಕ್ಷಿದಾರರಾಗಿದ್ದು ಅವರುಗಳು ನ್ಯಾಯಾಲಯಕ್ಕೆ ಗೈರುಹಾಜರಾಗಿ ಸಾಕ್ಷಿ ನುಡಿದಿರುವುದಿಲ್ಲ. ಇದರಿಂದ 2 ನೇ ಆರೋಪಿ, ಆತನ ಮೇಲೆ ಆರೋಪಿಸಿರುವ ಆರೋಪಗಳಿಂದ ಬಿಡುಗಡೆ ಹೊಂದಲು ಬಹುಮುಖ್ಯ ಕಾರಣವಾಗಿರುತ್ತದೆ. ಆರೋಪಿಯ ಸ್ವಇಚ್ಛಾ ಹೇಳಿಕೆ ದಾಖಲೆ ಮಾಡಿಕೊಂಡ ಪೋಲೀಸ್ ಅಧಿಕಾರಿ ಯಾವ ಕಾರಣಕ್ಕಾಗಿ ಈ ನ್ಯಾಯಾಲಯದ ಮುಂದೆ ಗೈರುಹಾಜರಾಗಿರುತ್ತಾರೆ, ಈ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ ಚಾಸಾ 23, ಚಾಸಾ 24, ಫ್ರಾಸಾ 7, ಫ್ರಾಸಾ 9 ಮತ್ತು ಫ್ರಾಸಾ 11 ರವರು ಈ ನ್ಯಾಯಾಲಯದ ಮುಂದೆ ಗೈರುಹಾಜರಾಗಿರುವುದರಿಂದ ಅಭಿಯೋಜನೆ ಪ್ರಕರಣಕ್ಕೆ ಮಾರಕವಾಗಿರುತ್ತದೆ. ಚಾಸಾ 1 ರವರು ದೂರನ್ನು ಕೊಟ್ಟಾಗ ಹಾಗೂ ಮರುಹೇಳಿಕೆಯನ್ನು ನೀಡಿದಾಗ ಕಳ್ಳತನ ಮಾಡಿದ್ದಾರೆ ಎನ್ನಲಾದ ಬೆಳ್ಳಿ ಒಡವೆಗಳಿಗೆ ಸಂಬಂಧಿಸಿದ ಖರೀದಿ ಮಾಡಿದ ರಸೀದಿಗಳನ್ನು ದೂರಿನ ಜೊತೆ ಹಾಜರುಪಡಿಸಿಲ್ಲ. ಚಾಸಾ 1 ಮತ್ತು ಚಾಸಾ 2 ರವರ ಸಾಕ್ಷ್ಯದ ಪ್ರಕಾರ ಅವರು ಮೈಸೂರಿನಿಂದ ಬೆಳ್ಳಿ ಒಡವೆಗಳನ್ನು ಖರೀದಿಸಿ ಪಾಂಡವಪುರ ಪೋಲೀಸ್ ಠಾಣಾ ರಸ್ತೆ ಹಿರೇಮರಳಿ ಸರ್ಕಲ್‌ನಲ್ಲಿ ನಾಕೋಡಾ ಜ್ಯುವೆಲರ್ ಎಂಬ ಅಂಗಡಿಯನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾಗ ಯಾರೋ ಕಳ್ಳರು ರಾತ್ರಿ ಸಮಯದಲ್ಲಿ ಬಾಗಿಲು ಮತ್ತು ಬೀಗವನ್ನು ಮೀಟಿ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎನ್ನುವುದಾಗಿರುತ್ತದೆ. ಆದರೆ ಚಾಸಾ 1 ರವರು ಅಂಗಡಿಯಲ್ಲಿ ನಿರ್ವಹಣೆ ಮಾಡಿದ್ದ ಸ್ಟಾಕ್ ರಿಜಿಸ್ಟರ್ ದಾಖಲೆಯನ್ನು ಪೋಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ. ಕಳ್ಳತನವಾಗಿದೆ ಎನ್ನಲಾದ ಬೆಳ್ಳಿ ಒಡವೆಗಳನ್ನು ಯಾವ ದಿನದಂದು? ಯಾವ ಅಂಗಡಿಯಿಂದ? ಎಷ್ಟು ಬೆಲೆಗೆ? ಯಾರ ಹೆಸರಿನಲ್ಲಿ? ಖರೀದಿ ಮಾಡಿದ್ದರು ಎಂದು ತೋರಿಸುವಂತಹ ಯಾವುದೇ ದಾಖಲಾತಿಗಳನ್ನು ಚಾಸಾ 1 ಮತ್ತು ಚಾಸಾ 2 ರವರು ಹಾಜರುಪಡಿಸಿರುವುದಿಲ್ಲ. ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರೂ ಆರೋಪಿಗಳ ವಶದಿಂದ ಜಪ್ತಿ ಮಾಡಿದ್ದ ಬೆಳ್ಳಿಯ ಒಡವೆಗಳನ್ನು ಚಾಸಾ 1 ರವರ ಮಧ್ಯಂತರ ವಶಕ್ಕೆ ನೀಡಲಾಗಿದೆ. ಚಾಸಾ 1 ರವರು ಒಡವೆಗಳಿಗೆ ಸಂಬಂಧಿಸಿದ ವಿವರಗಳನ್ನು ನಿಪಿ 1 ರಲ್ಲಿ ನೀಡದೇ ಇದ್ದರೂ ಚಾಸಾ 1 ರವರ ಮಧ್ಯಂತರ ವಶಕ್ಕೆ ಬೆಳ್ಳಿಯ ಒಡವೆಗಳನ್ನು ನೀಡಲಾಗಿರುತ್ತದೆ. ಆರೋಪಿಗಳು ಚಾಸಾ 24 ರವರ ಮುಂದೆ ಸ್ವ ಇಚ್ಛಾ ಹೇಳಿಕೆ ನೀಡಿದ ಆಧಾರದಲ್ಲಿ ಆರೋಪಿಗಳು ತೋರಿಸಿದ ಮೇರೆಗೆ ಬೆಳ್ಳಿ ಒಡವೆಗಳನ್ನು ಜಪ್ತಿ ಮಾಡಿರುವುದಾಗಿ ಅಭಿಯೋಜನೆಯವರು ಯಾವುದೇ ಸಂಶಯಕ್ಕೆ ಆಸ್ಪದ ನೀಡದಂತೆ ಸಾಬೀತುಪಡಿಸಬೇಕಾದ ಪ್ರಾಥಮಿಕ ಹೊಣೆಗಾರಿಕೆ

ಹೊಂದಿದ್ದು ಈ ಪ್ರಸ್ತುತ ಪ್ರಕರಣದಲ್ಲಿ ಚಾಸಾ 23 ಮತ್ತು ಚಾಸಾ 24 ರವರನ್ನು ಅಭಿಯೋಜನೆಯವರು ಹಾಜರಿಟ್ಟು ವಿಚಾರಣೆಗೆ ಒಳಪಡಿಸುವಲ್ಲಿ ವಿಫಲರಾಗಿರುತ್ತಾರೆ. ತಪ್ಪೊಪ್ಪಿಗೆ ಹೇಳಿಕೆ ಪೋಲೀಸ್ ಅಧಿಕಾರಿಗಳ ಮುಂದೆ ನೀಡಿರುವುದು ಸ್ವೀಕಾರಾರ್ಹ ಸಾಕ್ಷ್ಯವಲ್ಲವೆಂದು ಹಲವಾರು ನಿರ್ಣಿತ ತೀರ್ಪುಗಳು ಸ್ಪಷ್ಟಪಡಿಸಿವೆ. ಪೋಲೀಸ್ ವಶದಲ್ಲಿ ಆರೋಪಿಗಳು ಇದ್ದಾಗ ಅವರು ನೀಡುವ ಮಾಹಿತಿಯಿಂದ ಯಾವುದಾದರೂ ಹೊಸ ಸತ್ಯ ಅಥವಾ ಮಾಲುಗಳು ಪತ್ತೆಯಾದಾಗ ಮಾತ್ರ ಅಂತಹ ಸಾಕ್ಷ್ಯ ಸ್ವೀಕಾರಾರ್ಹ ಸಾಕ್ಷ್ಯವಾಗಿರುತ್ತದೆ. ಜಪ್ತಿ ಮಾಡಿದ್ದೇವೆ ಎನ್ನಲಾದ ವಸ್ತುಗಳ ಮೂಲ ಮಾಹಿತಿ ಆರೋಪಿಯ ಹೇಳಿಕೆಯಿಂದಲೇ ಆ ವಸ್ತು ಪತ್ತೆಯಾಯಿತು ಎಂಬುದನ್ನು ಅಭಿಯೋಜನೆಯವರು ಸಾಬೀತುಪಡಿಸಬೇಕು. ಜಪ್ತಿ ಮಾಡಿರುವ ಒಡವೆಗಳು ದೂರುದಾರರಿಗೆ ಸೇರಿದ್ದವು ಎಂಬುದನ್ನು ಸಾಕ್ಷಿದಾರರುಗಳ ಮೂಲಕ ಹಾಗೂ ದಾಖಲಾತಿಗಳ ಮೂಲಕ ಗುರುತಿಸಿ ನ್ಯಾಯಾಲಯಕ್ಕೆ ಅಭಿಯೋಜನೆಯವರು ಸಾಕ್ಷ್ಯಧಾರಗಳನ್ನು ಒದಗಿಸಬೇಕು. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 27 ರನ್ವಯ ಜಪ್ತಿ ಪ್ರಕ್ರಿಯೆಗಳನ್ನು ತನಿಖಾಧಿಕಾರಿ ಹೇಗೆ ನಡೆಸಬೇಕು ಎನ್ನುವ ಬಗ್ಗೆ ಸೂಕ್ತ ಮಾರ್ಗದರ್ಶನ ಇರುತ್ತದೆ. ಕಳ್ಳತನ ನಡೆದ ಸ್ಥಳದಿಂದ ಹಿಡಿದು ಆರೋಪಿಯ ಬಂಧನ, ಸ್ವತ್ತುಗಳನ್ನು ವಶಪಡಿಸಿಕೊಳ್ಳುವವರೆಗಿನ ಎಲ್ಲಾ ಘಟನೆಗಳ ಸರಣಿಯನ್ನು ಅಭಿಯೋಜನೆಯವರು ಸಂಶಾಯಾತೀತವಾಗಿ ಸಾಬೀತುಪಡಿಸಬೇಕು. ಈ ಪ್ರಸ್ತುತ ಪ್ರಕರಣದಲ್ಲಿ ಚಾಸಾ 25 ರವರು ಕಳ್ಳತನ ನಡೆದಿದೆ ಎನ್ನಲಾದ ಸ್ಥಳ ಪಂಚನಾಮೆ ಮಾಡಲು ಹೋದಾಗ ವಾಸ್ತವವಾಗಿ ಅಂಗಡಿಯ ಸ್ಥಿತಿ ಹೇಗೆ ಇತ್ತು ಎನ್ನುವ ಬಗ್ಗೆ ಪೋಟೋ ತೆಗೆಸಿಲ್ಲ, ಬೀಗ ಹೊಡೆದಿದ್ದರು ಎನ್ನುವುದಕ್ಕೆ ಸಂಬಂಧಿಸಿದ ವಸ್ತುಗಳನ್ನು ಜಪ್ತಿ ಮಾಡಿಲ್ಲ, ಬೀಗ ಹೊಡೆದು ತೆಗೆದುಕೊಂಡು ಹೋಗಿದ್ದರೋ, ಅಥವಾ ಅಲ್ಲೇ ಬಿಸಾಡಿ ಹೋಗಿದ್ದರೋ ಎನ್ನುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ತನಿಖಾಧಿಕಾರಿ ಸಂಗ್ರಹ ಮಾಡಿಲ್ಲ. ಆರೋಪಿಗಳು ಹಳೆ ಎಂ ಓ ಬಿ ಗಳೆಂದು ತಿಳಿಯಿತು ಎಂದು ಪತ್ತೆ ಹಚ್ಚಿದ ಪೋಲೀಸ್ ಅಧಿಕಾರಿಗಳು ಅವರ ಸಾಕ್ಷ್ಯದಲ್ಲಿ ಹೇಳಿದ್ದು ಈ ಪ್ರಸ್ತುತ ಪ್ರಕರಣದಲ್ಲಿ ಆರೋಪಿಗಳು ಪಾಲ್ಗೊಂಡಿದ್ದರು ಅಥವಾ ಭಾಗಿಯಾಗಿದ್ದಾರೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಲು ಅಭಿಯೋಜನೆಯವರು ಬೆರಳಚ್ಚು ತಜ್ಞರ ವರದಿ ಹಾಗೂ ವೈಜ್ಞಾನಿಕ ಸಾಕ್ಷ್ಯಾಧಾರಗಳನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಇದು 2011 ರಲ್ಲಿ ಘಟಿಸಿರುವ ಘಟನೆಯಾಗಿದ್ದು ಆ ಸಮಯದಲ್ಲಿಯೂ ಶ್ವಾನದಳ, ಬೆರಳಚ್ಚು ತಜ್ಞರ ಸಹಾಯ, ಪೋಟೋ ತೆಗೆಸುವ ವೀಡಿಯೋ ಮಾಡಿಸುವ ಸೌಕರ್ಯ ಇತ್ತು, ಆದರೂ ಈ ಪ್ರಕರಣದ ತನಿಖಾಧಿಕಾರಿ ವೈಜ್ಞಾನಿಕ ಸಾಕ್ಷ್ಯಧಾರಗಳನ್ನು ಸಮರ್ಪಕವಾಗಿ ಸಂಗ್ರಹಣೆ ಮಾಡದೆ ಕೇವಲ ಚಾಸಾ 24 ರವರು ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅಪರಾಧಿಕ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿ ಇದೇ ಆರೋಪಿಗಳು ಪಾಂಡವಪುರ ಪೋಲೀಸ್ ಠಾಣೆ

ಪ್ರಕರಣದಲ್ಲಿಯೂ ಭಾಗಿಯಾಗಿದ್ದರು ಎಂದು ವರ್ಗಾಯಿಸಿದ ದಾಖಲಾತಿಗಳ ಆಧಾರದಲ್ಲಿ ಆರೋಪಿಗಳ ಮೇಲೆ ದೋಷಾರೋಪಣೆ ಪಟ್ಟಿ ತಯಾರಿಸಿ ಸಲ್ಲಿಸಿರುವುದಾಗಿ ಕಂಡುಬರುತ್ತದೆ. ಚಾಸಾ 25 ರವರು ಈ ಪ್ರಸ್ತುತ ಪ್ರಕರಣವನ್ನು ಸಮರ್ಪಕವಾಗಿ ತನಿಖೆ ನಡೆಸಿ ಆರೋಪಿಗಳ ಪಾಲ್ಗೊಳ್ಳುವಿಕೆ, ಬೆಳ್ಳಿ ಒಡವೆಗಳು ಚಾಸಾ 1 ಮತ್ತು ಚಾಸಾ 2 ರವರ ಅಂಗಡಿಗೆ ಸೇರಿದ್ದವು ಎನ್ನುವ ಸಂಗತಿಗಳನ್ನು ಪ್ರಾಥಮಿಕವಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಒಟ್ಟಿನಲ್ಲಿ ಅಭಿಯೋಜನೆಯವರು ಸಾಬೀತುಪಡಿಸಿರುವ ಲಿಖಿತ ಮತ್ತು ಮೌಖಿಕ ಸಾಕ್ಷ್ಯಾಧಾರಗಳಲ್ಲಿ ದ್ವಂದ್ವ, ವ್ಯತಿರಿಕ್ತ ಸಾಕ್ಷ್ಯ ಹೊರಹೊಮ್ಮಿ ಬಂದಿರುವುದರಿಂದ ಈ ನ್ಯಾಯಾಲಯ ಬಂದಿರುವ ಅಂತಿಮ ತೀರ್ಮಾನ ಏನೆಂದರೆ, ಯಾವುದೇ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯವರು ಸಾದರಪಡಿಸಿರುವ ಪ್ರಕರಣದಲ್ಲಿ ಸಂಶಯ ಹೊಮ್ಮಿದ್ದರೆ ಆ ಸಂಶಯದ ಲಾಭವನ್ನು ಆರೋಪಿಗೆ ನೀಡಬೇಕೆಂಬುದು ಅಪರಾಧಿಕ ನಿರ್ಣಿತ ತತ್ವ. ಈ ಪ್ರಸ್ತುತ ಪ್ರಕರಣದಲ್ಲಿಯೂ ಅಭಿಯೋಜನೆಯವರ ಪ್ರಕರಣದಲ್ಲಿ ಈ ಮೇಲೆ ಚರ್ಚಿಸಿರುವಂತೆ ಹಲವಾರು ಅನುಮಾನಗಳು ನ್ಯಾಯಾಲಯದ ಮನದಲ್ಲಿ ಮೂಡಿವೆ. ಆದ್ದರಿಂದ, ಅನುಮಾನದ ಲಾಭವನ್ನು 2 ನೇ ಆರೋಪಿಗೆ ನೀಡಿ ಅಭಿಯೋಜನೆಯವರು ಆರೋಪಿ ಮೇಲೆ ಆರೋಪಿಸಿರುವಂತೆ ಭಾರತೀಯ ದಂಡ ಸಂಹಿತೆ ಕಲಂ 457 ಮತ್ತು 380 ಪರಿಚ್ಛೇದದ ಬಹು ಮುಖ್ಯ ಘಟಕಾಂಶಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅಭಿಪ್ರಾಯಿಸಿ ಈ ಮೇಲೆ ರಚಿತವಾಗಿರುವ ಅಂಶ **1** ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

20. ಅಂಶ **2** :- ಅಂಶ-1 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಮತ್ತು ಸಾಕ್ಷ್ಯಾಧಾರಗಳಿಂದ, 2 ನೇ ಆರೋಪಿಯ ಮೇಲಿರುವ ಆರೋಪ ದೃಢಪಟ್ಟಿರುವುದರಿಂದ 2 ನೇ ಆರೋಪಿಯು ಬಿಡುಗಡೆ ಹೊಂದಲು ಅನರ್ಹನೆಂದು ಪರಿಗಣಿಸಿ ಈ ಕೆಳಕಂಡಂತೆ ಅಂತಿಮ ಆದೇಶ ಮಾಡಿರುತ್ತದೆಃ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 2 ನೇ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 457, 380 ರ ಅಡಿಯಲ್ಲಿನ ಅಪರಾಧಗಳಿಂದ ಖುಲಾಸೆಗೊಳಿಸಲಾಗಿದೆ.

2 ನೇ ಆರೋಪಿಯ ಜಾಮೀನು ಮುಚ್ಚಳಿಕೆಯು ಈ ದಿನದಿಂದ 2 ತಿಂಗಳ ನಂತರ ಜಾರಿಯಲ್ಲಿದ್ದು, ಆ ನಂತರ ಜಾಮೀನು ಮುಚ್ಚಳಿಕೆಯು ತಂತಾನೆ ರದ್ದಾಗುತ್ತದೆ.

ವೈಯಕ್ತಿಕ ಮುಚ್ಚಳಿಕೆಗಳನ್ನು ಮತ್ತು ಜಾಮೀನುದಾರರ ಮುಚ್ಚಳಿಕೆಗಳನ್ನು ಮೇಲ್ಕಂನವಿ ಅವಧಿ ನಂತರ ರದ್ದುಪಡಿಸಿದೆ.

ಈ ಕಛೇರಿಗೆ ಈ ಮೂಲಕ ನಿರ್ದೇಶಿಸಿರುವುದೇನೆಂದರೆ ಮುದ್ದೆ ಮಾಲು **1** ರಿಂದ **14** ಸ್ವತ್ತುಗಳಿರುವ ಪೋಟೋವನ್ನು ಹಾಗೂ ಈ ಕಡತವನ್ನು **3** ನೇ ಆರೋಪಿ ವಿರುದ್ಧ ಪ್ರತ್ಯೇಕ ವಿಭಜಿತ ಪ್ರಕರಣ ಸಂಖ್ಯೆ ಸಿ ಸಿ **6/2019** ಅಂತಿಮವಾಗಿ ಗುಣಾವಗುಣಗಳ ಮೇಲೆ ತೀರ್ಮಾನ ಮಾಡುವ ತನಕ ಸುರಕ್ಷಿತವಾಗಿ ಸಂರಕ್ಷಿಸಿಡತಕ್ಕದ್ದು**.**

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು, ನಂತರದಲ್ಲಿ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 09.04.2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

**(ಆರ್.ಮಹೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ಪಾಂಡವಪುರ

ಅನುಬಂಧ

ಅಭಿಯೋಜನೆಯ ಪಕ್ಷದ ಪರವಾಗಿ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರ ಪಟ್ಟಿ:-

| | | |
|---|---|---|
| ಪ್ರಾಸಾ.1 | : | ಅರವಿಂದ ಕುಮಾರ್ |
| ಪ್ರಾಸಾ.2 | : | ರಾಜೇಶ |
| ಪ್ರಾಸಾ.3 | : | ಸೋಮಶೇಖರಶೆಟ್ಟಿ |
| ಪ್ರಾಸಾ.4 | : | ಗೇವರ್ ಚಂದ್ |

| | | |
|---|---|---|
| ಫ್ರಾಸಾ.5 | : | ಶ್ರೀನಿವಾಸ ಪ್ರಸಾದ್ |
| ಫ್ರಾಸಾ.6 | : | ಮುರುಳಿಗೌಡ |
| ಫ್ರಾಸಾ.7 | : | ಶಿವರಾಜ |
| ಫ್ರಾಸಾ.8 | : | ಜಾರ್ಜ್ |
| ಫ್ರಾಸಾ.9 | : | ರಮೇಶ |
| ಫ್ರಾಸಾ.10 | : | ಗಣೇಶ |
| ಫ್ರಾಸಾ.11 | : | ಜಯಶೀಲನ್ |
| ಫ್ರಾಸಾ.12 | : | ವಸಂತಕುಮಾರಿ |
| ಫ್ರಾಸಾ.13 | : | ಕೆ ಸಿ ಎಂ ರಾಜು |
| ಫ್ರಾಸಾ.14 | : | ಎಂ ಮಂಜುನಾಥ |
| ಫ್ರಾಸಾ.15 | : | ಶಿವಕುಮಾರ |
| ಫ್ರಾಸಾ.16 | : | ನರಸಿಂಹಯ್ಯ |

ಅಭಿಯೋಜನೆಯ ಪಕ್ಷದ ಪರ ಗುರುತಿಸಲಾಗಿರುವ ದಾಖಲಾತಿಗಳು :-

| | | |
|---|---|---|
| ನಿಪಿ.1 | : | ದೂರು |
| ನಿಪಿ.2 | : | ಸ್ಥಳ ಮಹಜರ್ |
| ನಿಪಿ.3 ಮತ್ತು 4 | : | ಪೋಟೋಗಳು |
| ನಿಪಿ.5 | : | ಪಂಚನಾಮೆ |
| ನಿಪಿ.6 | : | ಸಾಕ್ಷಿಯ ಹೇಳಿಕೆ |
| ನಿಪಿ.7 | : | ಮಹಜರ್ |
| ನಿಪಿ.8 | : | ದಾಖಲೆ ಮಹಜರ್ |
| ನಿಪಿ.9 | : | ವರದಿ |
| ನಿಪಿ.10 | : | ನೋಂದಣಿ ಪ್ರಮಾಣಪತ್ರ |
| ನಿಪಿ.11 | : | ದೂರು |
| ನಿಪಿ.12 | : | ಪ್ರ ವ ವರದಿ |

ಆರೋಪಿ ಪರವಾಗಿ ವಿಚಾರಣೆ ಮಾಡಲ್ಪಟ್ಟ ಸಾಕ್ಷೀದಾರರು :-

- ಇಲ್ಲ -

ಆರೋಪಿ ಪರವಾಗಿ ಗುರುತಿಸಲ್ಪಟ್ಟ ದಾಖಲಾತಿಗಳು :-

- ಇಲ್ಲ -

ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲ್ಪಟ್ಟ ಮುದ್ದೆ ಮಾಲುಗಳು :-

ಮು ಮಾ : ಪೋಟೋಗಳು

(ಆರ್ ಮಹೇಶ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ನ್ಯಾಯಾಲಯ, ಪಾಂಡವಪುರ.

(ತೀರ್ಪನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ)

ಃಆದೇಶಃ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 2 ನೇ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 457, 380ರ ಅಡಿಯಲ್ಲಿನ ಅಪರಾಧಗಳಿಂದ ಖುಲಾಸೆಗೊಳಿಸಲಾಗಿದೆ.

2 ನೇ ಆರೋಪಿಯ ಜಾಮೀನು ಮುಚ್ಚಳಿಕೆಯು ಈ ದಿನದಿಂದ 2 ತಿಂಗಳ ನಂತರ ಜಾರಿಯಲ್ಲಿದ್ದು, ಆ ನಂತರ ಜಾಮೀನು ಮುಚ್ಚಳಿಕೆಯು ತಂತಾನೆ ರದ್ದಾಗುತ್ತದೆ.

ವೈಯಕ್ತಿಕ ಮುಚ್ಚಳಿಕೆಗಳನ್ನು ಮತ್ತು ಜಾಮೀನುದಾರರ ಮುಚ್ಚಳಿಕೆಗಳನ್ನು ಮೇಲ್ಮನವಿ ಅವಧಿ ನಂತರ ರದ್ದುಪಡಿಸಿದೆ.

ಈ ಕಛೇರಿಗೆ ಈ ಮೂಲಕ ನಿರ್ದೇಶಿಸಿರುವುದೇನೆಂದರೆ ಮುದ್ದೆ ಮಾಲು **1** ರಿಂದ **14** ಸ್ವತ್ತುಗಳಿರುವ ಪೋಟೋವನ್ನು ಹಾಗೂ ಈ ಕಡತವನ್ನು **3** ನೇ ಆರೋಪಿ ವಿರುದ್ಧ ಪ್ರತ್ಯೇಕ ವಿಭಜಿತ ಪ್ರಕರಣ ಸಂಖ್ಯೆ ಸಿ ಸಿ **6/2019** ಅಂತಿಮವಾಗಿ ಗುಣಾವಗುಣಗಳ ಮೇಲೆ ತೀರ್ಮಾನ ಮಾಡುವ ತನಕ ಸುರಕ್ಷಿತವಾಗಿ ಸಂರಕ್ಷಿಸಿಡತಕ್ಕದ್ದು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ಪಾಂಡವಪುರ